

# ಸಿಹಿ ಕಹಿ

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ
Editor : MARUTI BASAVANTAPPA HOSAMANI
Cell : +91 9741319119

ಕನ್ನಡ ದಿನಪತ್ರಿಕೆ, ಬಾಗಲಕೋಟೆ
ಬಾಗಲಕೋಟೆಯಿಂದ ಪ್ರಕಟಿತ
RNI REG No. : KARKAN/2016/75068

SIHI KAHI
KANNADA DAILY MORNING
BAGALKOT

Volume : 06 | Issue : 304 | Tuesday 23-04-2024 | E-mail : maruti.b.hosamani76@gmail.com | Page: 4 | Price : Rs. 1/-

## ಬ್ಲಾಕ್ ಮೇಲ್ ಮಾಡುವ ನಕಲಿ ನಾಯಕರ ಬಗ್ಗೆ ಆತಂಕ ಬೇಡ..!

**ದೇವರ ಹಿಪ್ಪರಗಿ :** ಅಧಿಕಾರಿ ವರ್ಗಕ್ಕೆ ಸುಮ ಸುಮ್ನೆ ಕ್ರಿಮಿನಲ್ ಪ್ರಕರಣಗಳು ದಾಖಲೆ ಮಾಡುತ್ತೇವೆ. ನಿಮ್ಮ ವಿರುದ್ಧ ಕಾನೂನು ಹೋರಾಟ ಮಾಡುತ್ತೇವೆ ಎಂದು ಗೊಡ್ಡು ಬೆದರಿಕೆ ಹಾಕುವ, ವಿವಿಧ ಕಡೆ ಸುಳ್ಳು ಆರೋಪ ಮಾಡುವ ಕೆಟ್ಟ ಕುತಂತ್ರ ಬುದ್ಧಿ ಶಕ್ತಿಯ ನಾಯಕರಿಗೆ ಭಯ ಪಡುವ ಅವಶ್ಯಕತೆ ಇಲ್ಲ ಎಂದು ಅಖಿಲ ಕರ್ನಾಟಕ ನಾಯಕ ತಳವಾರ ಜನಾಂಗದ ಹಿತ ರಕ್ಷಣೆ ಸಮಿತಿಯ ತಾಲೂಕು ಅಧಕ್ಷ ವಿಜಯ ಸಾಲವಾಡಗಿ. ಹೇಳಿದರು.

ಪಟ್ಟಣದ ಖಾಸಗಿ ಹೊಟೆಲ್ ಯೊಂದರಲ್ಲಿ ಸುದ್ದಿ ಗೋಷ್ಠಿ ಆಯೋಜಿಸಿದ್ದ ತಳವಾರ ಸಮಾಜದ ಶೈಕ್ಷಣಿಕ ಹಾಗೂ ಸಾಮಾಜಿಕ ಜಾಗೃತಿ ಸಭೆಯಲ್ಲಿ ಮಾತನಾಡುತ್ತಿದ್ದರು.



ತಳವಾರ ಮತ್ತು ಪರಿವಾರ ಜಾತಿಯ ಪದಗಳು, ನಾಯಕ/ನಾಯ್ಕೊಡಿ ಜಾತಿ ಪದಗಳಿಂದ ಬಿಟ್ಟು ಹೋದ ಪದಗಳು, ಸಮಾನಾರ್ಥಕ ಪದಗಳು ಎಂದು ರಾಜ್ಯ ಮತ್ತು ಕೇಂದ್ರ ಸರಕಾರ ತಿದ್ದುಪಡಿ ಮಾಡಿ, ಪರಿಶಿಷ್ಟ ಪಂಗಡದ ಪಟ್ಟಿಗೆ ಸೇರ್ಪಡೆ ಗೊಳಿಸಿ ಅಧಿಕೃತವಾಗಿ ಗೆಜೆಟ್ ಹೊರಡಿಸುವ ಮೂಲಕ ಈ ಸಮುದಾಯದಗಳಿನೆ ನ್ಯಾಯ ಒದಗಿಸುವ ಕಾರ್ಯ ಮಾಡಿವೆ. ಆದರೆ ಇತ್ತೀಚಿಗೆ ನಕಲಿ ಜಾತಿ ತಡೆ ಹಿಡಿಯುವ ಎಂದು ನಕಲಿ ಸಂಘಟನೆ ಕಟ್ಟಿಕೊಂಡು, ಕಂದಾಯ ಇಲಾಖೆ, ಸಮಾಜ ಕಲ್ಯಾಣ ಇಲಾಖೆ ಹಾಗೂ ಸಿ ಆರ್ ಸೆಲ್ ಇಲಾಖೆಯಲ್ಲಿ ಸುಖಾ ದೂರು ಕೂಡುತ್ತಾ ಅಧಿಕಾರಿ ವರ್ಗಕ್ಕೆ ಕಿರುಕುಳ ಕೊಡುವ ಕೆಲಸ ಮಾಡುತ್ತಿದ್ದಾರೆ. ಆದರೆ ಅಧಿಕಾರಿ ವರ್ಗ ಯಾವುದೇ ಕಾರಣ–ಕ್ಕೂ ಸುಳ್ಳು ಆರೋಪಗಳಿಗೆ ಮನ್ನಣೆ ಮಾಡದೆ, ಸರಕಾರದ ಮಾರ್ಗ ಸೂಚಿಯಂತೆ ಕಾನೂನು ಚೌಕಟ್ಟಲ್ಲಿ ಜಾತಿ ಪ್ರಮಾಣ ವಿತರಿಸುವ ಮತ್ತು ಪರಿಶೀಲಿಸುವ ಕಾರ್ಯ ಮಾಡಬೇಕು ಎಂದು ಮನವಿ ಮಾಡಿದರು. ಒಂದು ವೇಳೆ ನಕಲಿ ಪ್ರಮಾಣ ಪತ್ರ ವಿತರಣೆಯಾದಲ್ಲಿ ನಾವು ಸಹ ಕಾನೂನು ಹೋರಾಟಕ್ಕೆ ಇಳಿಯಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

ಈ ಸಂದರ್ಭದಲ್ಲಿ ಪಟ್ಟಣ ಪಂಚಾಯತ್ ಮಾಜಿ ಅಧ್ಯಕ್ಷ ರಾವುತ ಮೇಟಗಾರ, ರಾಜು ಮಣ್ಣೂರ, ಚಂದು ಅಲ್ಲಾಪುರ, ಮುದಕಪ್ಪ ಡೋಣುರ, ರಮೇಶ್ ಕೋರಿ, ಮಲ್ಲು ಉತ್ನಾಳ, ಶಿವಶರಣರ ನಾಟೀಕಾರ, ರೇವಣ್ಣ ಹತ್ತಳ್ಳಿ, ಚಂದು ತಳವಾರ, ಶಂಕರ್ ಜಮಾದಾರ ಇನ್ನೂ ಅನೇಕ ಯುವಕರು ಹಾಗೂ ಮುಖಂಡರು ಉಪಸ್ಥಿತರಿದ್ದರು.

**ತಾಲೂಕ ವರದಿಗಾರರು ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಭೀಮಪ್ಪ ಹಚ್ಯಾಳ ದೇವರ ಹಿಪ್ಪರಗಿ**

## ಸರ್ಕಾರ ದಿಂದ ನ್ಯಾಯಾಂಗ ವ್ಯವಸ್ಥೆಗೆ ಸರಿಯಾದ ಮೂಲಭೂತ ಸೌಕರ್ಯಗಳು ಸಿಗುತ್ತಿಲ್ಲ, ಬೇಸರ ವ್ಯಕ್ತಪಡಿಸಿದ: ನ್ಯಾ. ಹಂಚಾಟೆ ಸಂಜೀವಕುಮಾರ

**ಹುನಗುಂದ :** ನ್ಯಾಯಾಂಗ ವ್ಯವಸ್ಥೆಗೆ ಸರ್ಕಾರ ಸರಿಯಾದ ಮೂಲಭೂತ ಸೌಲಭ್ಯಗಳನ್ನು ಒದಗಿಸದೇ ಇರೋದರಿಂದ ರಾಜ್ಯದ ಅನೇಕ ಜಿಲ್ಲೆ ಮತ್ತು ತಾಲೂಕ ಕೋರ್ಟ್ ಗಳಲ್ಲಿ ಸರಿಯಾದ ಬೆಂಚ್, ಕುರ್ಚಿ, ಕುಡಿಯುವ ನೀರು, ಶೌಚಾಲಯ ವ್ಯವಸ್ಥೆಯಿಲ್ಲ ಮತ್ತು ಸರ್ಕಾರಿ ವಕೀಲರ ನೇಮಕವಾಗುತ್ತಿಲ್ಲ ಎಂದು ಕರ್ನಾಟಕ ಉಚ್ಚ ನ್ಯಾಯಾಲಯದ ಗೌರವಾನ್ವಿತ ನ್ಯಾಯಾಮೂರ್ತಿ ಹಂಚಾಟೆ ಸಂಜೀವಕುಮಾರ ಸರ್ಕಾರದ ಧೋರಣೆಗೆ ಬೇಸರ ವ್ಯಕ್ತಪಡಿಸಿದರು.

ಪಟ್ಟಣದ ನ್ಯಾಯಾಲಯದ ಆವರಣದಲ್ಲಿ ಬಾಗಲಕೋಟ ಜಿಲ್ಲಾ ನ್ಯಾಯಾಂಗ, ಲೋಕೋಪಯೋಗಿ ಇಲಾಖೆ ಹಾಗೂ ವಕೀಲರ ಸಂಘ ಹುನಗುಂದ ಮತ್ತು ಇಳಕಲ್ಲ ಇವರ ಸಹಯೋಗದಲ್ಲಿ ಹಮ್ಮಿಕೊಳ್ಳಲಾಗಿದ್ದ ಹುನಗುಂದ ದಲ್ಲಿ ನೂತನ ಜಿಲ್ಲಾ ಮತ್ತು ಸತ್ರ ಸಂಚಾರಿ ನ್ಯಾಯಾಲಯವನ್ನು ಉದ್ಘಾಟಿಸಿ ಮಾತನಾಡಿದ ಅವರು, ಕೋರ್ಟ್ ಗಳ ಮೂಲಭೂತ ಸೌಕರ್ಯಗಳಿಗೆ ಅನುದಾನ ನೀಡಿ ಎಂದು ಸರ್ಕಾರಕ್ಕೆ ಮನವಿ ಮಾಡಿದರೇ ನ್ಯಾಯಾಲಯಗಳಿಂದ ಯಾವದೇ ತರಹದ ರೇವಿನ್ಯೂ (ಆದಾಯ) ಇಲ್ಲ ಅಂತಾ–



ರೆ ಆದರೆ ನ್ಯಾಯಾಂಗ ವ್ಯವಸ್ಥೆಯಿಂದ ಪ್ರತಿ ವರ್ಷ 7 ಕೋಟಿ ಆದಾಯ ನೀಡುತ್ತಿದ್ದರೂ ನ್ಯಾಯಾಂಗ ವ್ಯವಸ್ಥೆಗೆ ಅನುದಾನ ನೀಡಲು ಸರ್ಕಾರದಲ್ಲಿ ಬಜೆಟ್ ಇಲ್ಲವೆಂದು ಹೇಳುತ್ತಿರುವುದು ಬೇಸರ ಸಂಗತಿಯಾಗಿದೆ. ಇನ್ನು ತಮ್ಮ ಹಕ್ಕು ರಕ್ಷಣೆಗಾಗಿ ಸಂವಿಧಾನದ ಚೌಕಟ್ಟಿನಲ್ಲಿ ನ್ಯಾಯ ಪಡೆಯಲು ಬಂದ ಕಕ್ಷಿದಾರರ ಮತ್ತು ಸಾಕ್ಷಿದಾರರ ಮೇಲೆ ಅಧಿಕಾರ ಚಲಾವಣೆ ಮಾಡದೇ ನ್ಯಾಯಧೀಶರು ಮತ್ತು ವಕೀಲರು ಹಾಗೂ ನ್ಯಾಯಾಲಯ ಸಿಬ್ಬಂದಿ ಗೌರವದಿಂದ ಕಾಣಬೇಕು.ಏಕವಚನ ಬಳಿಕೆ ಮಾಡಬೇಡಿ.ಒಬ್ಬ ವ್ಯಕ್ತಿ ಮತ್ತು ಕುಟುಂಬದ ಜೀವನ ಭವಿಷ್ಯವನ್ನು ನಿರ್ಧಾರಿಸುವ ಗುರುತರ ಜವಾಬ್ದಾರ ನಿಮ್ಮ ಮೇಲಿದೆ.ಒಬ್ಬ ನ್ಯಾಯಾಧೀಶರ ಉತ್ತಮ ತೀರ್ಪುನ ಹಿಂದೆ ವಕೀಲರ ಅಗಾಧ ಶ್ರಮ ಇರುತ್ತೆದೆ.ನ್ಯಾಯಾಧೀಶರು ಮತ್ತು ವಕೀಲರು ದಿನದ 16 ಗಂಟೆಯ ಕಾಲ ಅಧ್ಯಯನ ಶೀಲರಾಗಿ ವೈಯಕ್ತಿಕ ಬದುಕನ್ನು ಮರೆತು ಸಮಾಜಕ್ಕಾಗಿ ಸಮರ್ಪಣಾ ಮನೋಭಾವದಿಂದ ಕೆಲಸ ಮಾಡಬೇಕು.ವಕೀಲ ವೃತ್ತಿ ನೈಪಣ್ಯತೆ ಇರಬೇಕು ವೃತ್ತಿಯನ್ನು ವಾಣಿಜೀಕರಣ ವಾಗಬಾರದು.ಬಾಗಲಕೋಟಿ ಜಿಲ್ಲಾ ನ್ಯಾಯಾಲಯದಲ್ಲಿ 10 ಸಾವಿರ ಇತ್ಯರ್ಥವಾಗದೇ ಇರುವ ಪ್ರಕರಣಗಳಿವೆ ಅದರಲ್ಲಿ ಹುನಗುಂದ ಮತ್ತು ಇಳಕಲ್ಲ ತಾಲೂಕಿನಲ್ಲಿ 3500 ಪ್ರಕರಣಗಳಿವೆ ಎಂದರು.

ಬಾಗಲಕೋಟಿ ಪ್ರಧಾನ ಜಿಲ್ಲಾ ಸತ್ರ ನ್ಯಾಯಾಲಯದ ನ್ಯಾಯಾಧೀಶ ಎನ್.ವಿ.ವಿಜಯ್ ಅಧ್ಯಕ್ಷತೆ ವಹಿಸಿ ಮಾತನಾಡಿ ಜಿಲ್ಲಾ ಸತ್ರ ನ್ಯಾಯಾಲಯ ಆರಂಭವಾಗಿದ್ದು ಈ ಭಾಗದ ಜನರಿಗೆ ಅನುಕೂಲವಾಗಿದೆ.ಮುಂದಿನ ದಿನಗಳಲ್ಲಿ ಹುನಗುಂದ ಮತ್ತು ಇಳಕಲ್ಲ ವಕೀಲರ ಸಂಘದಿಂದ ಸೌಲಭ್ಯಕ್ಕಾಗಿ ಬೇಡಿಕೆಯ ಪ್ರಸ್ತಾವಣೆಯನ್ನು ಸಲ್ಲಿಸಿದರೇ ಅದನ್ನು ಪ್ರಮಾಣಿಕವಾಗಿ ಹೈಕೋರ್ಟಿಗೆ ಕಳಿಸಿ ಕೊಡುವ ಕೆಲಸ ಮಾಡಲಾಗುವುದು ಎಂದರು

ಕರ್ನಾಟಕ ವಕೀಲರ ಪರಿಷತ್ನ ಸದಸ್ಯ ಎಸ್.ಎಸ್. ಮಿಟ್ಟಲಕೋಡ ಮಾತನಾಡಿ ಇಳಕಲ್ಲದಲ್ಲಿ ಆರಂಭವಾಗಿರುವ ಸಂಚಾರಿ ನ್ಯಾಯಾಲಯವನ್ನು ಸಿವಿಲ್ ನ್ಯಾಯಾಲಯದ ಖಾಯಂ ಗೊಳಿಸುವುದು ಮತ್ತು ಸಧ್ಯ 2 ದಿನದ ನಡೆಯುವ ಈ ಜಿಲ್ಲಾ ಸತ್ರ ಸಂಚಾರಿ ನ್ಯಾಯಾಲಯವನ್ನು ಮುಂದಿನ ದಿನಗಳಲ್ಲಿ ವಾರದ 6 ದಿನಗಳನ್ನು ನಡೆಯುವಂತೆ ಪರಿಷತ್ತಿಂದ ಒತ್ತಾಯ ಮಾಡಲಾಗುವುದು ಅದರಂತೆ ನೀವು ಕೂಡಾ ಇದರ ಬೇಡಿಕೆಯನ್ನು ಹೈಕೋರ್ಟ್ ಸಲ್ಲಿಸಿ ಎಂದರು.

ಈ ಸಂದರ್ಭದಲ್ಲಿ ಅಪರ ಸಿವಿಲ್ ನ್ಯಾಯಾಧೀಶ ಬಸವರಾಜ ನೇಸರಗಿ, ಪ್ರಧಾನ ಸಿವಿಲ್ ನ್ಯಾಯಾಧೀಶೆ ದೀಪಾ ಅರಳಗುಂಡಿ, ಹಿರಿಯ ಸಿವಿಲ್ ನ್ಯಾಯಾಧೀಶ ಹನಮಂತರಾವ್ ಕುಲಕರ್ಣಿ, ಹುನಗುಂದ ಮತ್ತು ಇಳಕಲ್ಲ ವಕೀಲರ ಸಂಘದ ಅಧ್ಯಕ್ಷರಾದ ಪ್ರಕಾಶ ಕಠಾಣಿ,ಬಿ.ಎ.ಅವಟಿ, ಪ್ರಧಾನ ಕಾರ್ಯದರ್ಶಿಗಳಾದ ಎಸ್.ಎಂ.ಉಪ್ಪಾರ,ವಿ.ಬಿ.ದಮ್ಮೂರವ ಠ,ಮಹಿಳಾ ಪ್ರತಿನಿಧಿ ಉಮಾ ಬಳ್ಳೊಳ್ಳಿ,ಲೋಕೋಪಯೋಗಿ ಇಲಾಖೆ ಕಾರ್ಯಪಾಲಕ ಅಭಿಯಂತರ ರಾಜಶೇಖರ ಕಡಿವಾಳ ಸೇರಿದ್ದಂತೆ ಅನೇಕ ನ್ಯಾಯಾಧೀಶರು ಹಾಗೂ ವಕೀಲರು ಇದ್ದರು.ವಕೀಲ ರಾಜಕುಮಾರ ಬಾದವಾಡಗಿ ಸ್ವಾಗತಿಸಿದರು,ವಕೀಲರ ಸಂಘದ ಮಾಜಿ ಅಧ್ಯಕ್ಷ ಎಂ.ಬಿ.ದೇಶಪಾಂಡೆ ಪ್ರಾಸ್ತಾವಿಕವಾಗಿ ಮಾತನಾಡಿದರು, ಎಂ.ಎಚ್.ಮಳ್ಳಿ ಪರಿಚಯಿಸಿದರು.

ಆರ್.ಎಚ್.ಕೊಕ್ಕಾಟೆ ನಿರೂಪಿಸಿ ವಂದಿಸಿದರು.

**ತಾಲೂಕ ವರದಿಗಾರರು ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಮಲ್ಲಿಕಾರ್ಜುನ. ಎಂ. ಬಂಡರಗಲ್ಲ ಹುನಗುಂದ**

## ಲೋಕಸಭಾ ಚುನಾವಣೆ: ಬಾಗಲಕೋಟೆಯ ಗಲ್ಲಿ ಗಲ್ಲಿಯ ಮನೆಯಂಗಳದ ರಂಗೋಲಿಯಲ್ಲಿ ಅರಳಿದ ಕಮಲ

### ಸಮಾಜದ ಕಟ್ಟಕಡೆಯ ವ್ಯಕ್ತಿಯ ಕಲ್ಯಾಣ, ಸಮಾಜಮುಖಿ ಚಿಂತನೆ, ಸಮರ್ಪಕ ಯೋಜನೆ ಬಿಜೆಪಿಯಿಂದ ಮಾತ್ರ ಸಾಧ್ಯ: ಚರಂತಿಮಠ

**ಬಾಗಲಕೋಟೆ :** ಸಮಾಜಮುಖಿ ಚಿಂತನೆ,ಸಮರ್ಪಕ ಯೋಜನೆ, ಸಮಾಜದ ಕಟ್ಟಕಡೆಯ ವ್ಯಕ್ತಿಯ ಕಲ್ಯಾಣ ಬಿಜೆಪಿಯಿಂದ ಮಾತ್ರ ಸಾದ್ಯ ಎಂದು ಮಾಜಿ ಡಾ.ವೀರಣ್ಣ ಚರಂತಿಮಠ ಹೇಳಿದರು.

ಅವರು ಬುಧವಾರ ಭಾರತೀಯ ಜನತಾ ಪಾರ್ಟಿ ಬಾಗಲಕೋಟೆ ಮತಕ್ಷೇತ್ರದಿಂದ ಹಮ್ಮಿಕೊಂಡ ಪಾದಯಾತ್ರೆ ಮೂಲಕ ಮನೆ ಮನೆಯ ಪ್ರಚಾರದಲ್ಲಿ ಭಾಗವಹಸಿ ಮತಯಾಚನೆ ಮಾಡಿ ಮಾತನಾಡಿದರು, ಕಳೆದ ಹತ್ತು ವರ್ಷದಿಮದ ಆಡಳಿತ ನಡೆಸಿದ ಪ್ರಧಾನಿ ನರೇಂದ್ರ ಮೋದಿಯವರ ನೇತೃತ್ವದ ಬಿಜೆಪಿ ಸರಕಾರ ಸಮಾಜದ ಕಟ್ಟಕಡೆಯ ವ್ಯಕ್ತಿಯ ಕಲ್ಯಾಣ ಹಿಡಿದು, ವಿಶ್ವ ಮಟ್ಟದಲ್ಲಿ ದೇಶದ ಗೌರವನ್ನು ಹೆಚ್ಚಿಸುವಂತ ದಿಟ್ಟ ನಿರ್ಧಾರಗಳನ್ನು ತೆಗೆದುಕೊಂಡು, ಆಡಳಿತಾತ್ಮಕವಾಗಿ ಇಡೀ ದೇಶದಲ್ಲಿ ಸುಶಾಸನ ಜಾರಿಗೆ ಬಂದಿತು, ಇಂತಹ ಸಮರ್ಥ ನೇತೃತ್ವಕ್ಕೆ ಮತ್ತೆ ದೇಶದ ಚುಕ್ಕಾಣಿ ವಹಿಸುವ ಸದವಕಾಶ ತಮ್ಮ



ಮುಂದಿದೆ, ಎಲ್ಲರೂ ಮೋದಿಯವರ ಜೊತೆಯಾಗೋಣ ಮತ್ತೊಮ್ಮೆ ಬಿಜೆಪಿ ಸರಕಾರವನ್ನು ಅಧಿಕಾರಕ್ಕೆ ತರಲಿ ಬಿಜೆಪಿ ಅಭ್ಯರ್ಥಿ ಪಿ.ಸಿ.ಗದ್ದಿಗೌಡರಗೆ ಮತನೀಡಿ ಎಂದರು.

ಇದಕ್ಕೂ ಮುಂಚೆ ಶ್ರೀರಾಮನವಮಿಯ ನಿಮಿತ್ಯ ಹೋಳೆ ಆಂಜನೇಯ ದೇವಸ್ಥಾನಲ್ಲಿ ಶ್ರೀರಾಮನ ಭಾವಚಿತ್ರಕ್ಕೆ ಪುಷ್ಪಾಂಜಲಿ ಮೂಲಕ ಗೌರವ ನಮನ ಸಲ್ಲಿಸಿ, ನಂತರ ಶಿವಾನಂದ ಜೀನ ನಿಂದ ಪ್ರಾರಂಭವಾದ ಚುನಾವಣೆ ಪ್ರಚಾರದ ಪಾದಯಾತ್ರೆ 16 ಹಾಗೂ 15 ನೇ ವಾರ್ಡಗಳಲಿ ವಾರ್ಡಗಳಲ್ಲಿ ಸಂಚರಿಸಿ, ಪಾದಯಾತ್ರೆ ಮೂಲಕ ಮನೆ ಮನೆಗೆ ತೇರಳಿ ಬಿಜೆಪಿ ಅಭ್ಯರ್ಥಿ ಪರ ಮತಯಾಚನೆ ಮಾಡಲಾಯಿತು.

ಪಾದಯಾತ್ರೆಯಲ್ಲಿ ಬಿಜೆಪಿ ಜಿಲ್ಲಾ ಉಪಾಧ್ಯಕ್ಷ ಲಕ್ಷ್ಮೀ ನಾರಾಯಣ ಕಾಸಟ್, ಗುರುಬಸವ ಸೂಳಿಭಾವಿ,ಶಿವಾನಂದ ಟವಳಿ,ಮುತ್ತಣ್ಣ ಬೇಣ್ಣೂರ, ಕುಮಾರ ಯಳ್ಳಿಗುತ್ತಿ, ಜೆಡಿಎಸ್ಸಿನ ಸಲೀಂ ಮೊಮಿನ್,ಈರಣ್ಣ ಅಥಣಿ ,ನಗರಸಭೆ ಸದಸ್ಯ ಅಯ್ಯಪ್ಪ ವಾಲ್ಮೀಕಿ,ಪರಶುರಾಮ ಗಳಕನ್ನವರ, ರಾಜು ಬಾಲಾಜಿ, ಬಸು ಅಂಬಿಗೇರ, ನಾಗರಾಜ ಕಟ್ಟಿಮನಿ,ಮಂಜು ಭಜನ್ನವರ್,ಈರಣ್ ದಿಡ್ಡಿ, ರವಿ ನಾಯಕ್, ಹನಮಂತ ಬಿಚ್ಚೆಲಿ, ಮಲ್ಲು ಕುರಬರ, ರಾಕೇಶ ಬಾಡದ, ಅನಿತಾ ಸರೋಧೆ,ಜ್ಯೋತಿ ಚವ್ಹಾಣ, ಮಂಜು ಚವ್ಹಾಣ, ಅನ್ನರಾಜ ಗೋಡ, ಕುಮಾರ ಪವಾರ ಪವಾರ ಸೇರಿದಂತೆ ಅನೇಕ ಜನ ಬಿಜೆಪಿ ಕಾರ್ಯಕರ್ತರು ಭಾಗವಹಿಸಿದ್ದರು.



**ಮನೆ ಮನೆಯ ರಂಗೋಲಿಯಲ್ಲಿ ಅರಳಿದ ಕಮಲ**
**ನಗರದ ವಿವಿಡ ವಾರ್ಡಗಳ ಗಲ್ಲಿ ಗಲ್ಲಿಯಲ್ಲಿನ ಮನೆಯಂಗಳ ಮುಂದೆ ರಂಗೋಲಿಯಲ್ಲಿ ಕಮಲವನ್ನೂ ಬಿಡಿಸಿ ಸ್ವಾಗತ ಜನರು ಸ್ವಾಗತ ಕೋರಿದ್ದು ವಿಶೇಷವಾಗಿತ್ತು.**

## ಸಂಯುಕ್ತಾ ಪಾಟೀಲ ಪರ ಸಚಿವ ಆರ್.ಬಿ. ತಿಮ್ಮಾಪುರ ಮತಯಾಚನೆ



**ಮುಧೋಳ :** ಆರ್ ಬಿ ತಿಮ್ಮಾಪೂರ ಬೂತ್ ನಂ 83/84/103 ಹಾಗೂ ಇನ್ನುಳಿದ ಬೂತಗಳಲ್ಲಿ ಸಂಯುಕ್ತಾ ಪಾಟೀಲ ಪರ ಪ್ರಚಾರ ಮಾಡಿ ಮತಯಾಚನೆ ಮಾಡಿದರು. ಕೇಂದ್ರ ಬಿಜೆಪಿ ಸರ್ಕಾರ ಮಲತಾಯಿ ಧೋರಣೆ ತೋರ್ತಾಯಿದೆ. ಬಿಜೆಪಿಯವರು ಕೋಮ ದ್ವೇಷದ ಬೀಜ ಬಿತ್ತುವಲ್ಲಿ ನಿಶೀಮರು. ಕೇಂದ್ರದ ಬಿಜೆಪಿ ನೇತೃತ್ವದ ಸರ್ಕಾರ ಯುವಕರ ಉದ್ಯೋಗ ಕೊಡಿಸುವುದರ ಬಗ್ಗೆ ಮಾತನಾಡುವುದಿಲ್ಲ, ಪುಲ್ವಾಮಾ ಸೈನಿಕರ ಹತ್ಯೆಯ ಬಗ್ಗೆ ಮಾತನಾಡುವುದಿಲ್ಲ ಜಿಎಸ್‌ಟಿ ಬಗ್ಗೆ ಮಾತನಾಡುವುದಿಲ್ಲ ಮೋದಿ ಅವರು ಇಲ್ಲಿವರೆಗೆ ಒಮ್ಮೆಯೂ ಕೂಡ ಪತ್ರಿಕಾಗೋಷ್ಠಿ ನಡೆಸಿಲ್ಲ ಇದು ದುರ್ದೈವ ದೇಶದ್ದು. ಇಂಥ ಪ್ರಧಾನಿಯನ್ನೇ ನಾವು ಪಡೆದಿದ್ದೇವೆ ಇದು ನಮ್ಮ ಕರ್ಮ. ಬೇಜವಾಬ್ದಾರಿಯ ಆಡಳಿತವನ್ನು ನಡೆಸಿದ್ದಾರೆ ಇಂಥ ಬಿಜೆಪಿ ಸರ್ಕಾರ ನಮಗೆ ಬೇಕಾ ರೈತರ ಬಗ್ಗೆ ಕನಿಕರಿ ಇಲ್ಲ. ರೈತರ ಬೆಳೆಗಳಿಗೆ ಉತ್ತಮ ಬೆಲೆ ಇಲ್ಲ ಹಾಗೂ ಇನ್ನಿತರ ವಿಷಯಗಳ ಬಗ್ಗೆ ಬಿಜೆಪಿ ಕೇಂದ್ರ ಸರ್ಕಾರದ ವಿರುದ್ಧ ಹರಿಹಾಯ್ದರು ಆದ್ದ–ರಿಂದ ಲೋಕಸಭಾ ಅಭ್ಯರ್ಥಿಯಾದಂತ ಸಂಯುಕ್ತ ಪಾಟಲರಿಗೆ ತಮ್ಮ ಅಮೂಲ್ಯವಾದ ಮತವನ್ನು ನೀಡಿ ಪ್ರಚಂಡ ಬಹುಮತದಿಂದ ಗೆಲ್ಲಿಸಿ ಕೊಡಬೇಕು ಎಂದು ಕಾರ್ಯಕರ್ತರಲ್ಲಿ ಬಂಧುಗಳಲ್ಲಿ ವಿನಂತಿ ಮಾಡಿಕೊಂಡರು.

ಈ ಸಂದರ್ಭದಲ್ಲಿ ಸ್ಥಳೀಯ ಮುಖಂಡರಾದ ಉದಯಸಿಂಹ ಪಡತಾರೆ ಅಶೋಕ ಕುಳಲಿ. ರಾಘು ಮೊಕಾಶಿ. ಸಿದ್ದು ಸೂರ್ಯವಂಶಿ. ಡಾ ಮಸಳಿ. ಸೈದು ಜಂಬಿಗಿ. ಲಾಲಸಾಬ ನದಾಫ. ಕುಮಾರ ಕೊನ್ನೂರ ಮಠ. ಬಂದು ಧಾರವಾಡಕರ. ಇನ್ನೂ ಮುಂತಾದ ಕಾಂಗ್ರೆಸ್ ಕಾರ್ಯಕರ್ತರು ಉಪಸ್ಥಿತರಿದ್ದರು.

## ನೇಹಾ ಹೀರೆಮಠರವರ ಅಮಾನವೀಯ ಕೊಲೆ ಆರೋಪಿ ಫಯಾಜ್‌ನಿಗೆ ಕಠಿಣ ಶಿಕ್ಷೆಗೆ ಗುರಿಪಡಿಸಲು: ಡಿ.ಎಸ್.ಎಸ್ ಆಗ್ರಹ

**ಕಲಬುರ್ಗಿ :** ಕರ್ನಾಟಕ ದಲಿತ ಸಂಘರ್ಷ (ಪ್ರೊ.ಬಿ.ಕೃಷ್ಣಪ್ಪ ಸ್ಥಾಪಿತ) ರಾಷ್ಟ್ರ ಸಮಿತಿ ತಮ್ಮಲ್ಲಿ ಆಗ್ರಹ ಪಡಿಸುವುದೇನೆಂದರೆ, ಹುಬಳಿ–ಧಾರವಾಡ ಅವಳಿ ಜಿಲ್ಲೆಯಲ್ಲಿ ಮಹಾನಗರ ಪಾಲಿಕೆಯ ಸದಸ್ಯರಾದ ನಿರಂಜನ್ ಹಿರೇಮಠ ಎಂಬುವರ ಪುತ್ರಿ ನೇಹಾ ಹಿರೇಮಠರವರನ್ನು ಬಿ.ವಿ.ಬಿ. ಕಾಲೇಜ್ ಕ್ಯಾಂಪಿಸ್ನಲ್ಲಿ 9 ಬಾರಿ ಚಾಕುವಿನಿಂದ ಇರಿದು ಬರ್ಬರಾಗಿ ಹಾಡು ಹಗಲೆ ಹತ್ಯೆ ಮಾಡಿರುವುದು ಅತ್ಯಂತ ಅಪಾಯಕಾರಿಯಾಗಿದೆ ಹಾಗೂ ಸಮಾಜದಲ್ಲಿ ಸಾಮರಸ್ಯ ಕಡಿಮೆಯಾಗಿದೆ. ಅಲ್ಲದೇ ಈ ಹಿಂದೆ–ಯೂ ಕೂಡ ರಾಜ್ಯದ ಹಲವು ಕಡೆ ಮಹಿಳೆಯರ ಮೇಲೆ ಅನ್ಯಾಯ ಅತ್ಯಚಾರಗಳಾದರು ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟು ಹೋಗಿ ರಾಜ್ಯದ ಹೆಣ್ಣುಮಕ್ಕಳಿಗೆ ಸೂಕ್ತ ರಕ್ಷಣೆ ಇಲ್ಲದಂತಾಗಿದೆ.



ಅದಕ್ಕಾಗಿ ಸಮಾಜ ಘಾತಕ ಶಕ್ತಿಗಳಿಗೆ ರಾಜಕೀಯವಾಗಿ ಹಾಗೂ ಪೊಲೀಸ್ ಠಾಣೆಗಳಲ್ಲಿ ರಾಜ್ಯ ಮರ್ಯಾದೆ ಸಿಗುವುದರಿಂದ ರಾಜಾರೋಷವಾಗಿ ಕಾನೂನು ಬಾಹಿರವಾಗಿ ಚಟುವಟಿಕೆಗಳು ನಡೆಯುತ್ತಿವೆ. ರಾಜ್ಯ ಸರಕಾರ ಕೂಡಲೇ ಈ ಪ್ರಕರಣವನ್ನು ಸತ್ಯಾಂಶವನ್ನು ಹೊರಬರಲು ಸಿ.ಬಿ.ಐ. ತನಿಖೆಗೆ ಒಳಪಡಿಸಬೇಕೆಂದು ಕರ್ನಾಟಕ ದಲಿತ ಸಂಘರ್ಷ ರಾಜ್ಯ ಸಮಿತಿಯಿಂದ ಆಗ್ರಹ ಪಡಿಸುತ್ತದೆ.

"ರಕ್ಷಿಸಿ, ರಕ್ಷಿಸಿ ರಾಜ್ಯದಲ್ಲಿನ ಅಮಾಯಕರ ವಿದ್ಯಾರ್ಥಿನಿಗಳನ್ನು ರಕ್ಷಿಸಿ ಪುಂಡ ರೌಡಿಗಳಿಂದ ವಿದ್ಯಾರ್ಥಿನಿಯರನ್ನು ರಕ್ಷಣೆ ನೀಡಿ" ಡಿ.ಸಿ ಯವರ ಮುಖಾಂತರ ಮುಖ್ಯಮಂತ್ರಿ ಯವರಿಗೆ ಮನವಿ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಡಿ.ಎಸ್‌ಎಸ್ ಜಿಲ್ಲಾ ಸಂಚಾಲಕರು ಸಚಿನ್ ಎಂ. ದೊಡ್ಡಮನಿ. ಜಿಲ್ಲಾ ಸಂ. ಸಂಚಾಲಕರು ಭೀಮಾಶಂಕರ್ ಎಂ. ಕದಮ್. ಜಿಲ್ಲಾ ಸಂ ಸಂಚಾಲಕರು ಸತೀಶ ಭಟ್ಟರ್ಕಿ. ಜಿಲ್ಲಾ ಮುಖಂಡರಾದ ಆನಂದ ಎಸ್ ಕೊಳ್ಳೂರು. ಡಿ.ಎಸ್.ಎಸ್ ರಾಜ್ಯ ಸಂಘಟನಾ ಸಂಚಾಲಕರು ಶಿವಾನಂದ ಎಸ್ ಸಾವಳಗಿ. ಕಲಬುರ್ಗಿ ತಾಲೂಕ ಸಂಚಾಲಕರು ವಿಘ್ನೇಶ. ಎನ್ ಶ್ರೀಮನಕರ್ ಹಾಗೂ ಇತರರು ಪಾಲ್ಗೊಂಡಿದ್ದರು.

**ಜಿಲ್ಲಾ ವರದಿಗಾರರು ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಶಿವಾನಂದ ಎಸ್ ಸಾವಳಗಿ. ಕಲಬುರ್ಗಿ**

## ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಉತ್ತಮ ಸಾಧನೆ



**ಹುಬ್ಬಳ್ಳಿ :** ಅಂಜುಮನ್–ಎ–ಇಸ್ಲಾಂನ ಅಂಗ ಸಂಸ್ಥೆಯಾದ ಹಳೇ ಹುಬ್ಬಳ್ಳಿಯ ಆಂಗ್ಲೊ ಉರ್ದು ಬಾಲಕಿಯರ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿನಿಯರು ಪ್ರಸಕ್ತ ಸಾಲಿನ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಉತ್ತಮ ಸಾಧನೆ ಮಾಡುವ ಮೂಲಕ ಸಂಸ್ಥೆಗೆ ಕೀರ್ತಿ ತಂದಿದ್ದಾರೆ. 5 ವಿದ್ಯಾರ್ಥಿನಿಯರು ಡಿಸ್ಟಿಂಕ್ಷನ್, 62 ವಿದ್ಯಾರ್ಥಿನಿಯರು ಪ್ರಥಮ ಶ್ರೇಣಿ ಹಾಗೂ 37 ವಿದ್ಯಾರ್ಥಿನಿಯರು ದ್ವಿತೀಯ ಶ್ರೇಣಿಯಲ್ಲಿ ಉತ್ತೀರ್ಣಗೊಂಡಿದ್ದಾರೆ.

ವಾಣಿಜ್ಯ ವಿಭಾಗದ ವಿದ್ಯಾರ್ಥಿನಿಯರಾದ ಶಫೀನ್ ಬಹಾದ್ದೂರ ಶೇ. 88.16, ಹಬೀಬಾ ಪ್ಯಾರೆ ಶೇ. 81. 33, ಬಿಬಿ ತಸ್ಕಿನ್ ಬೆಂಗೇರಿ ಶೇ. 80.66, ಸಾನಿಯಾ ಚೌಧರಿ ಶೇ. 80 ಹಾಗೂ ತನಾಝು ಪಠಾಣ ಶೇ. 80 ಅಂಕ ಪಡೆದಿದ್ದಾರೆ.

ಕಲಾ ವಿಭಾಗದ ಬಿಬಿ ಸಕೀನಾ ಕಿಲ್ಲೇದಾರ್ ಶೇ. 86.66, ಸಾನಿಯಾ ಸವನೂರ್ ಶೇ. 83, ರಹಮತ್‌ಬಿ ಬೂದಿಹಾಳ ಶೇ. 81.33, ಮಹೆನೂರ್ ಬಂಕಾಪೂರ ಶೇ. 80 ಹಾಗೂ ಶಿರೀನ ಶೇಖ್ ಶೇ. 80 ಅಂಕಗಳನ್ನು ಪಡೆದಿದ್ದಾರೆ.

## ರಾಜ್ಯದಲ್ಲಿ ಮಹಿಳೆಯರಿಗೆ ಸುರಕ್ಷತೆಯಿಲ್ಲ: ಹೇಮಲತಾ ನಾಯಕ

**ಕೊಪ್ಪಳ :** ರಾಜ್ಯದಲ್ಲಿ ಕಾಂಗ್ರೆಸ್ ಆಡಳಿತಕ್ಕೆ ಬಂದಾಗಿನಿಂದ ಮಹಿಳೆಯರಿಗೆ ಸುರಕ್ಷತೆಯಿಲ್ಲ ಎಂಬುದು ಪದೇ ಪದೇ ಸಾಬೀತಾಗಿದೆ ಎಂದು ವಿಧಾನಪರಿಷತ್ ಸದಸ್ಯೆ ಹೇಮಲತಾ ನಾಯಕ ಹೇಳಿದರು.




ಅವರು ಶುಕ್ರವಾರದಂದು ನಗರದ ಪತ್ರಿಕಾಭವನದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ತೀರಾ ಹದಗೆಟ್ಟಿದೆ,ಹಿಂದೂ ಕಾರ್ಯಕರ್ತರ ಮೇಲೆ ಬಿಜೆಪಿ ಕಾರ್ಯಕರ್ತರ ಮೇಲೆ ಹಗೆತನ ಸಾಧಿಸುವುದು ಕಾಂಗ್ರೆಸ್ ಪಕ್ಷಕ್ಕೆ ಸರ್ವೇ ಸಾಮಾನ್ಯವಾಗಿದೆ, ಪ್ರಧಾನಿ ಮೋದಿಯವರು ನಾರಿ ಶಕ್ತಿ ಸಮ್ಮಾನ್ ಯೋಜನೆ ರೂಪಿಸುತ್ತಿದ್ದರೆ ಇತ್ತಕಡೆ ಕಾಂಗ್ರೆಸ್ ಹಿರಿಯ ಶಾಸಕ ಶಾಮನೂರು ಶಿವಶಂಕರಪ್ಪ ಅವರು ಮಹಿಳಾ ವಿರೋಧಿ ಹೇಳಿಕೆಯನ್ನು ನೀಡುತ್ತಾರೆ, ಮಹಿಳೆಯು ಅಡುಗೆ ಮನೆಗೆ ಸೀಮಿತವಾಗಿರಬೇಕು ಎನ್ನುವರು, ಹೈಕೋರ್ಟ ಕೂಡ ಬೆಳಗಾವಿಯಲ್ಲಿ ನಡೆದ ಮಹಿಳೆ ಮೇಲಿನ ದೌರ್ಜನ್ಯ ಕಳವಳ ವ್ಯಕ್ತಪಡಿಸಿದೆ, ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟಿದೆ ಎನ್ನಲು ಇದಕ್ಕಿಂತ ಪುರಾವೆ ಬೇಕಾ ? ಎಂದ ಅವರು ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದ ಮೇಲೆ ಮಹಿಳೆಯರ ಮೇಲಿನ ದೌರ್ಜನ್ಯ ಶೇ.72% ರಷ್ಟು ಹೆಚ್ಚಾಗಿದೆ,ಹುಬ್ಬಳ್ಳಿಯಲ್ಲಿ ಹಿಂದೂ ಯುವತಿ ನೇಹಾ ಹಿರೇಮಠ ಅವರ ಹತ್ಯೆ ಅತ್ಯಂತ ದುರಾದೃಷ್ಟಕರ ಸಂಗತಿ ಈ ಘಟನೆ ಖಂಡಾನರ್ಹ ಆರೋಪಿಗೆ ಕಠಿಣ ಶಿಕ್ಷೆಯಾಗಬೇಕು ಎಂದ ಅವರು ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದ ಮೇಲೆ ಯಾವುದೇ ಅಭಿವೃದ್ಧಿ ಕಾರ್ಯಗಳು ಆಗಿಲ್ಲ,ಗ್ಯಾರಂಟಿ ಹೆಸರಿನಲ್ಲಿ ಬೆಲೆ ಏರಿಕೆ, ವಿದ್ಯುತ್ ದರ ಹೆಚ್ಚಳ, ಎಸ್‌ಆರ್ ವ್ಯಾಲ್ಯೂ ದರ ಹೆಚ್ಚಳ, ಆಡಳಿತ ಪಕ್ಷದ ಶಾಸಕರೇ ವ್ಯಾಪಕ ಭ್ರಷ್ಟಾಚಾರದ ಬಗ್ಗೆ ದೂರು ನೀಡುತ್ತಿದ್ದಾರೆ, ಆರ್ಥಿಕವಾಗಿ ರಾಜ್ಯ ಸರಕಾರ ದಿವಾಳಿಯಾಗುತ್ತಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಬಿಜೆಪಿ ಪಕ್ಷದ ಗೀತಾ ಮುತ್ತಾಳ, ಗೀತಾ ಪಾಟೀಲ್, ಪ್ರಸಾದ್ ಗಾಳಿ ಉಪಸ್ಥಿತರಿದ್ದರು.

## ಸ್ನೇಹ ಸಂಭ್ರಮ: ಹಳೆ ವಿದ್ಯಾರ್ಥಿಗಳ ಸಮ್ಮಿಲನ



**ಮಹಾಲಿಂಗಪುರ :** ಪಟ್ಟಣದ ವಾಸವಿ ಕಲ್ಯಾಣ ಮಂಟಪದಲ್ಲಿ ಚನ್ನಗಿರೇಶ್ವರ ಪ್ರಾಸಾದಿಕ ಪ್ರೌಢಶಾಲೆಯ 1996–97ನೇ ಸಾಲಿನ ಎಸ್‌ಎಸ್‌ಎಲ್ ವಿದ್ಯಾರ್ಥಿಗಳು ಸ್ನೇಹಸಂಭ್ರಮ ಹೆಸರಿನಲ್ಲಿ ಅಪರೂಪದ ಕಾರ್ಯಕ್ರಮ ಆಯೋಜಿಸಿದ್ದರು.

28 ವರ್ಷಗಳ ನಂತರ ಇನ್ನೂರಕ್ಕೂ ಹೆಚ್ಚು ಹಳೆ ವಿದ್ಯಾರ್ಥಿಗಳು ಈ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದರು. ದಿನವಿಡಿ ಹಾಡು, ನೃತ್ಯ, ಗುರುವಂದನೆ, ಸಾಮೂಹಿಕ ಭಾವಚಿತ್ರ, ವಯಕ್ತಿಕ ಪರಿಚಯ, ಸಾಮೂಹಿಕ ಭೋಜನ ಕೂಟ, ಹರಟೆಯೊಂದಿಗೆ ಹಳೆಯ ನೆನಪುಗಳನ್ನು ಮೆಲಕು ಹಾಕಿದರು. ಶಿಕ್ಷಕರಾದ ಬಿ.ಜಿ.ಬಿರಾದಾರ, ಸಿ.ಎಚ್. ಹುಕ್ಕೇರಿ, ಬಿ.ಎನ್.ಅರಕೇರಿ, ಬಿ.ಡಿ.ಗೋಕಾಕ, ಜಿ.ಜಿ.ಸೊನ್ನದ, ಎಂ.ಐ.ಡಾಂಗೆ, ಎಚ್.ಟಿ. ಅಮ್ಮಲಜೇರಿ, ಎಸ್.ಬಿ. ಹುಲಕುಂದ, ಎಂ.ಎಚ್.ಕುಂಟೋಜಿ, ಎಸ್.ಸಿ.ಹಿರೇಮಠ, ಎಸ್.ಬಿ.ಮಟಗಾರ, ಎಸ್.ಬಿ. ಕೋರಿಶೆಟ್ಟಿ ಅವರಿಗೆ ಗೌರವ ಸಮರ್ಪಣೆ ಮಾಡಲಾಯಿತು. ಹಳೆ ವಿದ್ಯಾರ್ಥಿಗಳಾದ ಅನೀಲ ಉಳ್ಳಾಗಡ್ಡಿ, ಶ್ರೀಶೈಲ ಕಾರಜೋಳ, ಈರಣ್ಣ ನಕಾತಿ, ಶಂಭುಲಿಂಗ ಬಡಿಗೇರ, ಮಹಾದೇವ ಪುಕಾಳೆ, ಸುರೇಶ ಕಲ್ಯಾಗೋಳ, ಪ್ರಕಾಶ ನುಚ್ಚಿ, ಶ್ರೀಶೈಲ ಹುಣಶ್ಯಾಳ, ಮೀರಾ ಮುಲ್ಲಾ, ಲಕ್ಷ್ಮಿ ಗೋಲಬಾಂವಿ, ಸುಮಾ ಸಂಕ್ರಾವತ, ಶೈಲಾ ಅಂಬಿ, ಶೋಭಾ ಕಾಲತಿಪ್ಪಿ, ಚನ್ನಪ್ಪ ಪಟ್ಟಣಶೆಟ್ಟಿ, ನೀಲಕಂಠ ಜಂಬಗಿ, ಮಹಾಲಿಂಗ ಟಿರಕಿ, ಉಮೇಶ ಹುಬ್ಬಳ್ಳಿ, ನಿಂಗಪ್ಪ ನಿಪನ್ಯಾಳ, ಮುತ್ತಪ್ಪ ಹುದ್ದಾರ, ವಿನೋದ ಬಿರಾದರ, ಮನೋಜ ಬಸಂತಾನಿ ಸೇರಿದಂತೆ ಹಲವರು ಇದ್ದರು.

## ಮೌಲಾನಾ ಆಜಾದ್ ಮಾದರಿ ಆಂಗ್ಲ ಮಾಧ್ಯಮ ಶಾಲೆ ಪ್ರವೇಶಕ್ಕೆ ಅರ್ಜಿ ಸಲ್ಲಿಕೆ ಅವಧಿ ವಿಸ್ತರಣೆ

**ಕೊಪ್ಪಳ :** 2024–25 ನೇ ಸಾಲಿಗಾಗಿ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಿಂದ ಜಿಲ್ಲೆಯಲ್ಲಿ ನಿರ್ವಹಣೆಯಾಗುತ್ತಿರುವ ಅಲ್ಪಸಂಖ್ಯಾತರ ಮೌಲಾನಾ ಆಜಾದ್ ಮಾದರಿ ಆಂಗ್ಲ ಮಾಧ್ಯಮ ಶಾಲೆಗಳಲ್ಲಿ 6ನೇ ತರಗತಿಯ ಪ್ರವೇಶಕ್ಕೆ ಅರ್ಜಿ ಸಲ್ಲಿಕೆ ಅವಧಿಯನ್ನು ವಿಸ್ತರಿಸಲಾಗಿದೆ.

ಪ್ರತಿ ಶಾಲೆಯಲ್ಲಿ ದಾಖಲಾತಿ 60 ಸೀಟುಗಳು ಮಾತ್ರ ಇದ್ದು, ಪೋಷಕರು/ವಿದ್ಯಾರ್ಥಿಗಳು ನೇರವಾಗಿ ಎಲ್ಲಾ ದಾಖಲೆಗಳೊಂದಿಗೆ ಆಯಾ ಮೌಲಾನಾ ಆಜಾದ್ ಶಾಲೆಯ ಮುಖ್ಯೋಪಾಧ್ಯಾಯರಿಗೆ ಸಂಪರ್ಕಿಸಿ ಮೇ 15 ರೊಳಗೆ ಅರ್ಜಿ ಸಲ್ಲಿಸಬೇಕು.

ಅಲ್ಪಸಂಖ್ಯಾತರ ಮೌಲಾನಾ ಆಜಾದ್ ಮಾದರಿ ಆಂಗ್ಲ ಮಾಧ್ಯಮ ಶಾಲೆ, ಸರ್ದಾರಗಲ್ಲಿ, ಕೊಪ್ಪಳ– 9900617290, ದಿಡ್ಡಿ–ಕೇರಾ ಓಣಿ, ಕೊಪ್ಪಳ–9900617290, ಮುನಿರಾಬಾದ್–9902168996, ಲಕ್ಷ್ಮೀ ಕ್ಯಾಂಪ್, ಗಂಗಾವತಿ–9880026927, ಕನಕಗಿರಿ–9611024212, ಕಾರಟಗಿ–8073548574, ತಾವರಗೇರಾ–8746812318, ಯಲಬುರ್ಗಾ–6363331628, ಕುಕನೂರು– 7829041942, ಶ್ರೀರಾಮನಗರ–9880026927 ಶಾಲೆಗಳಿಗೆ ಸಂಪರ್ಕಿಸಿ ಅರ್ಜಿ ಸಲ್ಲಿಸಬಹುದು.

ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ/ ಡಾ॥ಎ.ಪಿ.ಜೆ.ಅಬ್ದುಲ್ ಕಲಾಂ ವಸತಿ ಶಾಲೆಯಲ್ಲಿ ಶೇ.75 ಅಲ್ಪಸಂಖ್ಯಾತರ ವಿದ್ಯಾರ್ಥಿಗಳಿಗೆ ಮತ್ತು ಶೇ.25 ಇತರೆ ವರ್ಗದವರಿಗೆ ಮೀಸಲಿಡಲಾಗಿದೆ. ಅಲ್ಪಸಂಖ್ಯಾತರ ವರ್ಗದ ಅಭ್ಯರ್ಥಿಗಳ ಕುಟುಂಬದ ವಾರ್ಷಿಕ ಆದಾಯ ಹಾಗೂ ಪ್ರವರ್ಗ–1ಕ್ಕೆ ಸೇರಿದ ಅಭ್ಯರ್ಥಿಗಳ ಕುಟುಂಬದ ವಾರ್ಷಿಕ ಆದಾಯ 2.50 ಲಕ್ಷ ಮಿತಿಯೊಳಗಿರಬೇಕು. ಹಿಂದುಳಿದ ವರ್ಗಗಳ 2ಎ, 3ಎ ಮತ್ತು 3ಬಿ ಅಭ್ಯರ್ಥಿಗಳ ಹಾಗೂ ಪ್ರವರ್ಗ–1ಕ್ಕೆ ಸೇರಿದ ಅಭ್ಯರ್ಥಿಗಳ ಕುಟುಂಬದ ವಾರ್ಷಿಕ ಆದಾಯ 2.50 ಲಕ್ಷ ಮಿತಿಯೊಳಗಿರಬೇಕು. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಅಭ್ಯರ್ಥಿಗಳ ಕುಟುಂಬದ ವಾರ್ಷಿಕ ಆದಾಯ 2.50 ಲಕ್ಷ ಮಿತಿಯೊಳಗಿರಬೇಕು. ಅಂಗವಿಕಲ ವಿದ್ಯಾರ್ಥಿಗಳಿಗೆ ಶೇ.05, ಮಾಜಿಸೈನಿಕರಿಗೆ ಶೇ. 04 ಕಾಯ್ದಿರಿಸಲಾಗಿದೆ. ವಿಶೇಷ ದುರ್ಬಲ ವರ್ಗ ಶೇ.05, ಸಫಾಯಿಕರ್ಮಚಾರಿ ವಿದ್ಯಾರ್ಥಿಗಳಿಗೆ ಶೇ.05 ಕಾಯ್ದಿರಿಸಲಾಗಿದೆ. ಅರ್ಜಿ ಸಲ್ಲಿಸಲು ವಿದ್ಯಾರ್ಥಿಗಳು 5 ನೇ ತರಗತಿಯಲ್ಲಿ ಉತ್ತೀರ್ಣರಾಗಿರಬೇಕು. ಭರ್ತಿ ಮಾಡಿದ ಅರ್ಜಿಯೊಂದಿಗೆ ಕಂದಾಯ ಇಲಾಖೆಯ ತಹಶೀಲ್ದಾರ ನೀಡಿದ ಜಾತಿ ಮತ್ತು ಆದಾಯ ದೃಢೀಕರಣ ಪ್ರಮಾಣ ಪತ್ರ, ವಾಸಸ್ಥಳ ಪ್ರಮಾಣ ಪತ್ರ, ಆಧಾರ್ ಕಾರ್ಡ್ ಹಾಗೂ ವಿದ್ಯಾರ್ಥಿ ಪಾಸ್‌ಪೋರ್ಟ್ ಅಳತೆಯ ಇತ್ತೀಚಿನ 4 ಭಾವಚಿತ್ರಗಳೊಂದಿಗೆ ಮತ್ತು ನಿಗದಿ ಪಡಿಸಿದ ದಿನಾಂಕದೊಳಗಾಗಿ ಅರ್ಜಿಯನ್ನು ಸಲ್ಲಿಸಬೇಕು. ಅಪೂರ್ಣವಾದ ಮತ್ತು ತಡವಾಗಿ ಬಂದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

ಹೆಚ್ಚಿನ ಮಾಹಿತಿಗಾಗಿ ಆಯಾ ತಾಲೂಕಿನ ಹತ್ತಿರದ ಮೌಲಾನಾ ಆಜಾದ್ ಮಾದರಿ ಶಾಲೆ/ ತಾಲ್ಲೂಕು ಅಲ್ಪಸಂಖ್ಯಾತರ ಮಾಹಿತಿ ಕೇಂದ್ರ ಅಥವಾ ಜಿಲ್ಲಾ ಅಧಿಕಾರಿಗಳು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಕೊಪ್ಪಳ ದೂ.ಸಂ: 08539–225070 ಗೆ ಸಂಪರ್ಕಿಸಬಹುದು ಎಂದು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಚಿಂಚಾ ಪಾನಕ ವಿತರಣೆಗೆ ಡಿಸಿ ಜಾನಕಿ ಚಾಲನೆ





**ಬಾಗಲಕೋಟೆ :** ಜಿಲ್ಲಾಡಳಿತ ಭವನದ ಆವರಣದಲ್ಲಿ ಆರೋಗ್ಯಕರವಾದ ಚಿಂಚಾ (ಹುಣಸೆ ಹಣ್ಣಿನ) ಪಾನಕ ವಿತರಣೆಗೆ ಜಿಲ್ಲಾಧಿಕಾರಿ ಜಾನಕಿ ಕೆ.ಎಂ ಪಾನಕ ಕುಡಿಯುವ ಮೂಲಕ ಬುಧವಾರ ಚಾಲನೆ ನೀಡಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ ಹಾಗೂ ಜಿಲ್ಲಾ ಆಯುಷ ಇಲಾಖೆ ಸಹಯೋಗದಲ್ಲಿ ಹಮ್ಮಿಕೊಂಡ ಆಯುಷ ಪಾನೀಯ ಪರಿಚಯ ಕಾರ್ಯಕ್ರಮದಡಿ ಚಿಂಚಾ ಪಾನಕ ವಿತರಣೆಗೆ ಚಾಲನೆ ನೀಡಿ ಮಾತನಾಡಿದ ಅವರು ಬಿಸಿಲಿನ ತಾಪಮಾನ ದಾಖಲೆ ಮಟ್ಟದಲ್ಲಿ ಏರಿಕೆ ಆಗುತ್ತಿದ್ದು, ಈ ಬೇಸಿಗೆಯ ಸುಡು ಬಿಸಿಲಿನ ದಿನಗಳಲ್ಲಿ ಸಾರ್ವಜನಿಕರಿಗೆ ಆರೋಗ್ಯಕರವಾದ ಪಾನೀಯಗಳ ಸೇವನೆ ಬಗ್ಗೆ ಜಾಗೃತಿ ಮೂಡಿಸಲು ಆಯುಷ ಪಾನೀಯ ಪರಿಚಯ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದರು.

ಜಿಲ್ಲಾಡಳಿತ ಭವನದಲ್ಲಿರುವ ಎಲ್ಲ ಇಲಾಖೆಯ ಸಿಬ್ಬಂದಿ ವರ್ಗದವರು ಹಾಗೂ ಕಚೇರಿಗೆ ಆಗಮಿಸುವ ಸುಮಾರು 500 ಜನ ಸಾರ್ವಜನಿಕರಿಗೆ ಪ್ರತಿ ವ್ಯಕ್ತಿಗೆ 100 ಎಂ.ಎಲ್ ನಂತೆ ಆಯುಷ ಚಿಂಚಾ ಪಾನಕ ನೀಡಲಾಗುತ್ತಿದೆ. ಈ ಪಾನಕ ಕುಡಿಯುವದರಿಂದ ಜೀರ್ಣಕ್ರಿಯೆ ಉತ್ತಮಗೊಳಿಸುತ್ತದೆ.

ಮಲಬದ್ದತೆ ನಿವಾರಿಸುವುದರ ಜೊತೆಗೆ ಶರೀರದ ದಾಹ ಹಾಗೂ ಬಾಯಾರಿಕೆಯನ್ನು ಸಹ ನೀಗಿಸುತ್ತದೆ ಎಂದು ತಿಳಿಸಿದರು.

ಜಿಲ್ಲಾ ಆಯುಷ ಅಧಿಕಾರಿ ಅಕ್ಕಮಹಾದೇವಿ ಗಾಣಿಗೇರ ಅವರು ಚಿಂಚಾ ಪಾನಕ (ಹುಣಸೆ ಹಣ್ಣಿನ ಪಾನಕ) ದಿಂದಾಗುವ ಉಪಯೋಗ ಹಾಗೂ ತಯಾರಿಸುವ ವಿಧಾನವನ್ನು ತಿಳಿಸಿಕೊಟ್ಟರು. ಚಿಂಚಾ ಪಾನಕಕ್ಕೆ ಹುಣಸೆ ಹಣ್ಣು 100 ಗ್ರಾಂ, ಬೆಲ್ಲದ ಪುಟಿ 400 ಗ್ರಾಂ. ಜೀರಿಗೆ ಪುಡಿ 10 ಗ್ರಾಂ, ಕಾಳು ಮೆಣಸಿನ ಪುಡಿ 5 ಗ್ರಾಂ ಹಾಗೂ ಸೈಂದವ ಲವಣ 5 ಗ್ರಾಂ ವಸ್ತುಗಳು ಬೇಕಾಗುತ್ತವೆ ಎಂದರು.

ಪಾನಕ ಮಾಡುವ ವಿಧಾನ :

ಹುಣಸೆ ಹಣ್ಣನ್ನು ಅಗತ್ಯ ಪ್ರಮಾಣದ ನೀರಿನಲ್ಲಿ ಇಡೀ ರಾತ್ರಿ ನೆನಸಿಡಬೇಕು. ಮರುದಿನ ಬೆಳಿಗ್ಗೆ ಅದನ್ನು ಶುದ್ದವಾದ ಕೈಗಳಿಂದ ಚೆನ್ನಾಗಿ ಹಿಸುಕಿ ಸೋಸಿಕೊಂಡು ಅಗತ್ಯ ಪ್ರಮಾಣದಷ್ಟು ನೀರನ್ನು ಪಾತ್ರೆಗೆ ಹಾಕಿಕೊಂಡು ಅಗತ್ಯ ಪ್ರಮಾಣದ ಹುಣಸೆ ಹಣ್ಣಿನ ಮಿಶ್ರಣವನ್ನು ನೀರಿನ ಪಾತ್ರೆಗೆ ಹಾಕಿ ನಿರ್ದಿಷ್ಟ ಪ್ರಮಾಣದ ಬೆಲ್ಲದ ಪುಡಿಯನ್ನು ನೀರಿನಲ್ಲಿ ಹಾಕಿ ಚೆನ್ನಾಗಿ ಕರಗಿಸಬೇಕು. ಕೊನೆಯಲ್ಲಿ ನಿರ್ದಿಷ್ಟ ಪ್ರಮಾಣದಲ್ಲಿ ಜೀರಿಗೆ ಪುಡಿ, ಕಾಳು ಮೆಣಸಿನ ಪುಡಿ, ಸೈಂದವ ಲವಣವನ್ನು ಸೇರಿಸಬೇಕು. 50 ರಿಂದ 100 ಮಿಲಿ ಕುಡಿಯಬೇಕು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಪಾನಕದ ಮಾಹಿತಿ ಕರಪತ್ರವನ್ನು ಬಿಡುಗಡೆ ಮಾಡಲಾಯಿತು. ಕಾರ್ಯಕ್ರಮದಲ್ಲಿ ಅಪರ ಜಿಲ್ಲಾಧಿಕಾರಿ ಪರಶುರಾಮ ಶಿನ್ನಾಳಕರ, ಜಿಲ್ಲಾ ವಾರ್ತಾಧಿಕಾರಿ ಅಮರೇಶ ದೊಡಮನಿ, ಜಿಲ್ಲಾಧಿಕಾರಿ ಕಚೇರಿಯ ಬಿ.ವಾಯ್.ಪಾಟೀಲ, ಮಂಜುನಾಥ ಪಾಟೀಲ, ಆಯುಷ ಇಲಾಖೆಯ ಜ್ಯೋತಿ ಕಾಂಬಳೆ, ಈರಮ್ಮ ಜಕನೂರ, ನಸತರ ಅಂಗಡಿ ಸೇರಿದಂತೆ ಇತರರು ಉಪಸ್ಥಿತರಿದ್ದರು.

## ಜಿಲ್ಲಾ ನಿಯಂತ್ರಣ ಕೊಠಡಿಯಲ್ಲಿ ದಿನದ 24 ಗಂಟೆ ನಿಗಾ ಚುನಾವಣಾ ವಾಹನಗಳಿಗೆ ಜಿಪಿಎಸ್ ಉಪಕರಣ ಅಳವಡಿಕೆ

**ಬಾಗಲಕೋಟೆ :** ಜಿಲ್ಲಾಡಳಿತ ಭವನದಲ್ಲಿರುವ ಜಿಲ್ಲಾ ಪಂಚಾಯತ ಸಭಾಭವನದಲ್ಲಿ ಸ್ಥಾಪಿಸಲಾಗಿರುವ ಜಿಲ್ಲಾ ನಿಯಂತ್ರಣ ಕೊಠಡಿಯಲ್ಲಿ ಚುನಾವಣಾ ಕಾರ್ಯಗಳಿಗೆ ನಿಯೋಜಿಸಲಾದ ವಾಹನಗಳಿಗೆ ಜಿಪಿಎಸ್ ಉಪಕರಣ ಅಳವಡಿಸಿ ದಿನದ 24 ಗಂಟೆಗಳ ಕಾಲ ನಿಗಾ ವಹಿಸಲಾಗುತ್ತಿದೆ ಎಂದು ಜಿಲ್ಲಾ ನಿಯಂತ್ರಣ ಕೋಶದ ನೋಡಲ್ ಅಧಿಕಾರಿ ಅಮರೇಶ ನಾಯಕ ತಿಳಿಸಿದ್ದಾರೆ.



ಲೋಕಸಭಾ ಚುನಾವಣೆ ಮಾಧರಿ ನೀತಿ ಸಂಹಿತೆ ಹಿನ್ನಲೆಯಲ್ಲಿ ಫ್ಲೈಯಿಂಗ್ ಸ್ಕ್ವಾಡ್ ತಂಡ, ವಿಡಿಯೋ ಕಣ್ಗಾವಲು ತಂಡ, ಸೆಕ್ಟರ ಅಧಿಕಾರಿಗಳ ತಂಡಗಳಿಗೆ ಚುನಾವಣಾ ಮತಗಟ್ಟೆ ಕ್ಷೇತ್ರ ಪರಿಶೀಲನೆ, ಕ್ಷೇತ್ರ ಭೇಟಿಗಾಗಿ ಚುನಾವಣಾ ಕರ್ತವ್ಯಕ್ಕೆ ನಿಯೋಜಿಸಲಾದ ವಾಹನಗಳ ಮಾನಿಟರಿಂಗ ಮಾಡಲು ಜಿಪಿಎಸ್ ಉಪಕರಣ ಅಳವಡಿಸಲಾಗಿದೆ. ವಿವಿಧ ತಂಡಗಳ ಕಾರ್ಯವೈಖರಿಗಳನ್ನು ನಿಯಂತ್ರಣ ಕೊಠಡಿಯಲ್ಲಿಯೇ ವಾಹನಗಳ ಚಲನವಲಗಳ ನೈಜ ಸ್ಥಿತಿಗಳನ್ನು ಪರಿಶೀಲಿಸಿ ಸಲಹೆ ಸೂಚನೆ ನೀಡಲಾಗುತ್ತಿದೆ ಎಂದು ತಿಳಿಸಿದ್ದಾರೆ.

ಚುನಾವಣೆ ಪ್ರಕ್ರಿಯೆಗೆ ಎಫ್‌ಎಸ್‌ಟಿ ತಂಡಗಳಿಗೆ 66 ವಾಹನ, ವಿಎಸ್‌ಟಿ ತಂಡಗಳಿಗೆ 7, ಸೆಕ್ಟರ ಅಧಿಕಾರಿಗಳಿಗೆ 15, ಪೊಲೀಸ್ ಅಧಿಕಾರಿಗಳಿಗೆ 36 ಹಾಗೂ ಎಸ್‌ಎಸ್‌ಟಿ ತಂಡಗಳಿಗೆ 2 ಸೇರಿ ಒಟ್ಟು 126 ವಾಹನಗಳಿಗೆ ಜಿಪಿಎಸ್ ಉಪಕರಣ ಅಳವಡಿಸಲಾಗಿದೆ. ಇದರಿಂದ ಪ್ರತಿಯೊಂದು ವಾಹನಗಳ ಚಲನವಲನ, ಮತಗಟ್ಟೆಗಳ ಕ್ಷೇತ್ರ ಪರಿಶೀಲನೆ ಕಾರ್ಯ ಚುರುಕುಗೊಂಡಿದ್ದು, ಸಾಕಷ್ಟು ಹಣವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿದೆ ಎಂದು ತಿಳಿಸಿದ್ದಾರೆ.

ಜಿಲ್ಲೆಯ ಎಲ್ಲ ವಿಧಾನಸಭಾ ಮತಕ್ಷೇತ್ರಗಳು ಸೇರಿ ಒಟ್ಟು 26 ಕಡೆಗಳಲ್ಲಿ ಚೆಕ್‌ಪೋಸ್ಟಗಳನ್ನು ಸ್ಥಾಪಿಸಲಾಗಿದ್ದು, ಮುಧೋಳ, ತೇರದಾಳ, ಜಮಖಂಡಿ, ಬೀಳಗಿ ಮತಕ್ಷೇತ್ರಗಳಲ್ಲಿ ತಲಾ 3 ಹಾಗೂ ಬಾದಾಮಿ, ಬಾಗಲಕೋಟೆ, ಹುನಗುಂದ ಮತಕ್ಷೇತ್ರಗಳಲ್ಲಿ ತಲಾ 4 ಚೆಕ್‌ಪೋಸ್ಟ ಹಾಗೂ ನರಗುಂದ ಮತಕ್ಷೇತ್ರದಲ್ಲಿ 2 ಚೆಕ್‌ಪೋಸ್ಟಗಳನ್ನು ಸ್ಥಾಪಿಸಲಾಗಿದೆ. ಪ್ರತಿ ಚೆಕ್‌ಪೋಸ್ಟಗೆ ಸಿಸಿಟಿವಿ ಕ್ಯಾಮರಾ ಅಳವಡಿಸಲಾಗಿದೆ. ಅವುಗಳ ದೃಶ್ಯಾವಳಿಗಳ ಪ್ರಸಾರ ನಿಯಂತ್ರಣ ಕೊಠಡಿಯಲ್ಲಿ ವೀಕ್ಷಿಸುವ ವ್ಯವಸ್ಥೆ ಮಾಡಲಾಗಿದೆ ಚೆಕ್‌ಪೋಸ್ಟ ಮೂಲಕ ಹಾದು ಹೋಗುವ ಎಲ್ಲ ವಾಹನಗಳ ದೃಶ್ಯವನ್ನು ವೀಕ್ಷಿಸಬಹುದಾಗಿದೆ. ಸಿಬ್ಬಂದಿಗಳ ಕಾರ್ಯವೈಖರಿ ಮೇಲೆ ಸಹ ನಿಗಾ ಇಡಲಾಗುತ್ತಿದೆ ಎಂದು ನೋಡಲ್ ಅಧಿಕಾರಿ ಅಮರೇಶ ನಾಯಕ ತಿಳಿಸಿದ್ದಾರೆ.

## ಶ್ರೀರಾಮನವಮಿ ಆಚರಣೆ



**ಬೈಲಹೊಂಗಲ :** ಶ್ರೀ ರಾಮನವಮಿ ಪ್ರಯುಕ್ತ ಪಟ್ಟಣದ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ವೃತ್ತದಲ್ಲಿ ಮರ್ಯಾದಾ ಪುರುಷೋತ್ತಮ ಶ್ರೀರಾಮನ ಭಾವಚಿತ್ರಕ್ಕೆ ಪೂಜೆ ಸಲ್ಲಿಸಲಾಯಿತು. ಪ್ರಭು ನೀಲಕಂಠ ಸ್ವಾಮೀಜಿ ಸಾನಿಧ್ಯ ವಹಿಸಿದ್ದರು.

ವಿಶ್ವಹಿಂದೂ ಪರಿಷತ್ ಜಿಲ್ಲಾಧ್ಯಕ್ಷ ಪ್ರಮೋದಕುಮಾರ ವಕ್ಕುಂದಮಠ ಚಿತ್ರನಟ ಶಿವರಂಜನ ಬೋಳನ್ನವರ, ವಿಜಯ ಮೆಟಗುಡ್ಡ, ಮಹಾಂತೇಶ ತುರಮರಿ, ಕಾಶಿನಾಥ ಬಿರಾದಾರ, ಬಿ. ಬಿ. ಗಣಾಚಾರಿ, ಅಶೋಕ ಸವದತ್ತಿ, ರಾಜು ಬಡಿಗೇರ, ಸುನೀಲ ಮರಕುಂಬಿ, ಸುಭಾಷ್ ತುರಮರಿ, ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು. ವೇ. ಮೂ.ವೀರೇಶ ನಂದಳ್ಳಿ ಮಠ ಶಾಸ್ತ್ರಿಗಳು ಪೂಜಾ ಕೈಂಕರ್ಯ ನೆರವೇರಿಸಿದರು.

## ಜನರು ಬದಲಾವಣೆ ಬಯಸಿದ್ದಾರೆ: ಸಚಿವ ಎಂ.ಬಿ. ಪಾಟೀಲ



**ವಿಜಯಪುರ :** ಜಿಲ್ಲೆಯ ಹಾಗೂ ರಾಜ್ಯದ ಜನರು ಬದಲಾವಣೆ ಬಯಸಿದ್ದಾರೆ ಎಂದು ಬೃಹತ್ ಹಾಗೂ ಮಧ್ಯಮ ಕೈಗಾರಿಕೆ ಸಚಿವ ಎಂ.ಬಿ. ಪಾಟೀಲ ಹೇಳಿದರು.

ಕಾಂಗ್ರೆಸ್ ಅಭ್ಯರ್ಥಿ ರಾಜು ಆಲಗೂರ ನಾಮಪತ್ರ ಸಲ್ಲಿಸಿದ ಬಳಿಕ ನಗರದಲ್ಲಿ ಸುದ್ದಿಗಾರರ ಜೊತೆಗೆ ಮಾತನಾಡಿದ ಅವರು, ರಾಜು ಆಲಗೂರು ಉತ್ತಮ ಕೆಲಸ ಮಾಡುತ್ತಾರೆ.

ಕಾಂಗ್ರೆಸ್ ಪಕ್ಷಕ್ಕೆ ಜಿಲ್ಲೆಯಲ್ಲಿ ಅಭೂತ ಪೂರ್ವ ಬೆಂಬಲ ವ್ಯಕ್ತವಾಗಿದೆ. ಜನರು ಕಾಂಗ್ರೆಸ್ ಬೆಂಬಲಿಸಿದ್ದಾರೆ ಎಂದರು.

ಹಾಲಿ ಸಂಸದರು ಕೆಲಸ ಮಾಡಿಲ್ಲ. ಲೋಕಸಭೆಯಲ್ಲಿ ಮಾತನಾಡಿಲ್ಲ.

ಆಲಮಟ್ಟಿ ಅಣೆಕಟ್ಟು ಎತ್ತರ ಸಂಬಂಧ ಕೆಲಸ ಮಾಡಿಲ್ಲ.

ತೋಟಗಾರಿಕೆ, ಪ್ರವಾಸೋದ್ಯಮ ಹಾಗೂ ಇತರೆ ಯಾವುದೇ ಕೆಲಸ ಮಾಡಿಲ್ಲ ಎಂದು ಪ್ರಧಾನಿ ನರೇಂದ್ರ ಮೋದಿ ವಿರುದ್ಧ ಸಚಿವ ಪಾಟೀಲ ಹರಿ ಹಾಯ್ದರು.

ಹತ್ತು ವರ್ಷದಲ್ಲಿ ಮೋದಿ ಆಡಳಿತದಲ್ಲಿ ಕೊಟ್ಟ ಮಾತಿನಂತೆ ನಿರುದ್ಯೋಗಿಗಳಿಗೆ ಉದ್ಯೋಗ ನೀಡಿಲ್ಲ. ಬೆಲೆ ಏರಿಕೆ ಕೊಡುಗೆ ನೀಡಿದ್ದಾರೆ.

ಕಪ್ಪು ಹಣ ವೈಟ್ ಮಾಡಲು ನೋಟ್ ಬ್ಯಾನ್ ಮಾಡಿದರು.

ಜನರ ಖಾತೆಗೆ ಹಣ ಹಾಕಲಿಲ್ಲ. ಕಪ್ಪು ಹಣ ವಿದೇಶದಿಂದ ತರಲಿಲ್ಲ

ಎಲ್ಲರೂ ಮೋದಿ ಅವರನ್ನು ನಂಬಿದ್ದರು. ಚುನಾವಣೆ ಬಾಂಡ್ ವಿಚಾರದಲ್ಲಿ, ಮೋದಿ ಅವರ ಭೃಷ್ಟಾಚಾರದ ಮುಖವಾಡ ಬಯಲಾಗಿದೆ. ಐಡಿ, ಇಡಿ ಸಿಬಿಐ ದುರ್ಬಳಕೆ ಮಾಡಿದ್ದಾರೆ.

ಲಿಕ್ಕರ್ ಹಗರಣದಲ್ಲಿ ದೆಹಲಿ ಸಿಎಂ ಕ್ರೇಜಿವಾಲ್ ಅವರನ್ನು ಬಂಧಿಸಿದ್ದಾರೆ. ಅದೇ ಲಿಕ್ಕರ್ ಮಾಫಿಯಾಗಳಿಂದ ಬಿಜೆಪಿ ಹಣ ಪಡೆದಿದೆ ಎಂದು ಆರೋಪಿಸಿದರು.

ಐದು ಗ್ಯಾರಂಟಿಗಳ ಬಗ್ಗೆ ಜನರಲ್ಲಿ ನಂಬಿಕೆ ಬಂದಿದೆ. ರಾಜ್ಯದಲ್ಲಿ ಈ ಬಾರಿ ಕಾಂಗ್ರೆಸ್ 20 ಸ್ಥಾನಗಳಲ್ಲಿ ಗೆಲ್ಲಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಕಾಂಗ್ರೆಸ್ ಆರುವ ದೀಪ. ಆರುವ ಮುನ್ನ ಜೋರಾಗಿ ಉರಿಯುತ್ತದೆ ಎಂಬ ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಹೇಳಿಕೆ ವಿಚಾರ ಪ್ರತಿಕ್ರಿಯೆ ನೀಡಿದ ಅವರು, ಅವರ ದೀಪ ಎಷ್ಟು ಬಾರಿ ಆರಿಸಲಾಗಿದೆ ಎಂದು ತಿಳಿದುಕೊಳ್ಳಲಿ ಎಂದು ಸಚಿವ ಪಾಟೀಲ ಟಾಂಗ್ ನೀಡಿದರು.

ಯಡಿಯೂರಪ್ಪ ಸಿಎಂ ಆಗಿದ್ದಾಗ ಎನೆಲ್ಲಾ ಮಾಡಿದ್ದಾರೆ.

ಈ ಚುನಾವಣೆಗೆ ಬಳಕೆ ಮಾಡಿಕೊಳ್ಳಲು ವಿಜಯೇಂದ್ರ ಅವರನ್ನು ರಾಜ್ಯಾಧ್ಯಕ್ಷರನ್ನಾಗಿ ಮಾಡಿದ್ದಾರೆ.

ವಿಜಯೇಂದ್ರ ಮೂರು ವರ್ಷಗಳ ಕಾಲ ಮಾತ್ರ ಅಧ್ಯಕ್ಷರಾಗಿರುತ್ತಾರೆ ಎಂದು ಅವರ ಪಕ್ಷದ ಪ್ರಹ್ಲಾದ ಜೋಶಿ ಹೇಳಿದ್ದಾರೆ ಎಂದರು.

## ಸಕ್ರೀಯ ಯುವತಿ ಸಂಯುಕ್ತರಿಗೆ ಒಮ್ಮೆ ಅವಕಾಶ ನೀಡಿ: ನೀಲಕಂಠ ಮುತ್ತೂರ

**ರಬಕವಿ–ಬನಹಟ್ಟಿ :** ಸ್ವಾತಂತ್ರ ?ಯ ಕಾಲದ ಇತಿಹಾಸ ಹೊಂದಿರುವ ಕಾಂಗ್ರೆಸ್ ಪಕ್ಷಕ್ಕೆ ಬಡವರ, ದುರ್ಬಲರ ಮತ್ತು ಆರ್ಥಿಕವಾಗಿ ಹಿಂದುಳಿದ ಜನರ ಕಷ್ಟಕ್ಕೆ ಸ್ಪಂದಿಸುವ ಬದ್ಧತೆಯಿದೆ. ಬಾಗಲಕೋಟ ಲೋಕಸಭಾ ಕ್ಷೇತ್ರಕ್ಕೆ ಹೊಸ ಕಾಯಕಲ್ಪ ನೀಡಲು ಉತ್ಸುಕರಾಗಿರುವ ಸಕ್ರೀಯ ಯುವತಿ ಸಂಯುಕ್ತ ಪಾಟೀಲರು ಕ್ಷೇತ್ರಕ್ಕೆ ಒಂದು ಪ್ರಣಾಲಿಕೆ ರೂಪಿಸಿದ್ದು, ಅದನ್ನು ಕ್ರಿಯಾತ್ಮಕವಾಗಿ ಅಳವಡಿಸುವ ಚಿಂತನೆಯಲ್ಲಿದ್ದಾರೆ. ಕಳೆದ ಎರಡು ದಶಕಗಳಿಂದ ತಮ್ಮ ತಂದೆ ಶಿವಾನಂದ ಪಾಟೀಲರ ಕ್ಷೇತ್ರವನ್ನು ಸಮರ್ಥವಾಗಿ ನಿಭಾಯಿಸಿದ ಹಿರಿಮೆಯ ಅಭ್ಯರ್ಥಿಯಾಗಿರುವ ಸಂಯುಕ್ತಾ ಪಾಟೀಲರಿಗೆ ಒಮ್ಮೆ ಮತ ನೀಡಿ ಅವಕಾಶ ಕೊಟ್ಟು ಕ್ಷೇತ್ರದ ಸರ್ವಾಂಗೀಣ ಬೆಳವಣಿಗೆಗೆ ಹಿರಿಯರು ಆಶೀರ್ವದಿಸಬೇಕೆಂದು ಹಿರಿಯ ಧುರೀಣ ನೀಲಕಂಠ ಮುತ್ತೂರ ನುಡಿದರು.



ರಬಕವಿಯ ಬಾಗೋಜಿಮಠದಲ್ಲಿ ನಡೆದ ರಬಕವಿ–ಬನಹಟ್ಟಿ ಹಿರಿಯರ ಸಭೆಯಲ್ಲಿ ಮಾತನಾಡಿದ ಅವರು ಕಳೆದ ಎರಡು ದಶಕಗಳಿಂದ ನಮ್ಮನ್ನು ಪ್ರತಿನಿಧಿಸಿರುವ ಸಂಸದರು ಯಾವುದೇ ಹೇಳಿಕೊಳ್ಳುವ ಕೆಲಸ ಮಾಡಿಲ್ಲ. ಬಾಗಲಕೋಟ–ಕುಡಚಿ ರೈಲು ಯೋಜನೆ ಕುಂಟುತ್ತಾ ಸಾಗುತ್ತಿದ್ದು, ಇಚ್ಛಾಶಕ್ತಿಯ ಕೊರತೆಯ ಸಂಸದರಿಗಿಂದ ಯುವತಿಯಾಗಿರುವ ಮತ್ತು ಕ್ಷೇತ್ರದ ಅಭಿವೃದ್ಧಿಗೆ ನೀಲನಕ್ಷೆ ಸಿದ್ಧಪಡಿಸಿಕೊಂಡಿರುವ ಕಾಂಗ್ರೆಸ್ ಅಭ್ಯರ್ಥಿಯನ್ನು ಆಯ್ಕೆ ಮಾಡಿ ಹೊಸ ಮುಖಕ್ಕೆ ಅವಕಾಶ ನೀಡಿ ಆಶೀರ್ವದಿಸಬೇಕೆಂದು ಮುತ್ತೂರ ಕೋರಿದರು.

ಕಾಂಗ್ರೆಸ್ ಅಭ್ಯರ್ಥಿ ಸಂಯುಕ್ತಾರ ಪತಿ ಶಿವಕುಮಾರ ತಾಲಂಪಲ್ಲಿ ಮಾತನಾಡಿ, ಕಳೆದರಡು ದಶಕಗಳಿಂದ ತಮ್ಮ ತಂದೆಯ ಕ್ಷೇತ್ರದಲ್ಲಿನ ಅಭುತಪೂರ್ವ ಅಭಿವೃದ್ಧಿಗೆ ಸಂಯುಕ್ತಾರು ಕಾರಣರಿದ್ದು, ಈ ಬಾರಿ ಹೊಸ ಮುಖವಾಗಿರುವ ಮತ್ತು ಕ್ಷೇತ್ರದ ಅಭಿವೃದ್ಧಿಗೆ ಟೊಂಕ ಕಟ್ಟಿ ಸಜ್ಜಾಗಿರುವ ಸಂಯುಕ್ತಾ ಪಾಟೀಲರಿಗೆ ಮತ ನೀಡಿ ಅವಕಾಶ ಕಲ್ಪಿಸಬೇಕೆಂದು ಮನವಿ ಮಾಡಿದರು.

ವೇದಿಕೆಯಲ್ಲಿ ಗಿರೀಶ ಮುತ್ತೂರ, ಸೋಮಶೇಖರ ಕೊಟ್ರಶೆಟ್ಟಿ, ಬನಹಟ್ಟಿಯ ಗುರುಸಿದ್ದಪ್ಪ ಚನಾಳ, ಮಹಾಶಾಂತ ಶೆಟ್ಟಿ, ಡಾ.ಟೆಂಗಿನಕಾಯಿ, ರಾಜಶೇಖರ ಮುತ್ತೂರ, ಉಮೇಶ ಹನಗಂಡಿ, ಮಲ್ಲಿಕಾರ್ಜುನ ಮುತ್ತೂರ, ಬಸವರಾಜ ಜಿಗಜಿನ್ನಿ, ಪ್ರಭಾಕರ ಢಪಳಾಪುರ, ಚಂದ್ರಶೇಖರ ಹುಲಗಬಾಳಿ, ಬಾಲಚಂದ್ರ ತೆಗ್ಗಿ, ಬಸವರಾಜ ಕುಂಚನೂರ, ಅಂದಾನಿ ಮುತ್ತೂರ, ಅಮಿತ್ ನಾಶಿ, ಮುರಗೇಶ ಮುತ್ತೂರ, ಪ್ರೇಮಸಾಗರ ಪಾಟೀಲ, ಗೋವಿಂದ, ಕೆ.ಆರ್.ಬಾಬು ಮುಂತಾದವರಿದ್ದರು.

## ಸಾಧಕ ವಿದ್ಯಾರ್ಥಿ ದರ್ಶನನ ಹೆಸರು ವರ್ಗ ಕೋಣೆಗೆ ನಾಮಕರಣ

**ರಬಕವಿ–ಬನಹಟ್ಟಿ :** 2024ರ ದ್ವಿತೀಯ ಪಿಯುಸಿ ಫಲಿತಾಂಶದಲ್ಲಿ ಕೊಣ್ಣೂರ ವಿಜ್ಞಾನ ಪದವಿ ಪೂರ್ವ ಮಹಾವಿದ್ಯಾಲಯದ ವಿದ್ಯಾರ್ಥಿ ದರ್ಶನ ತೇರದಾಳ 600 ಅಂಕಗಳಿಗೆ 591 ಅಂಕಗಳನ್ನ ಪಡೆದುಕೊಳ್ಳುವುದರ ಮುಖಾಂತರ ರಾಜ್ಯಕ್ಕೆ 8ನೇ ಸ್ಥಾನ, ಬಾಗಲಕೋಟೆ ಜಿಲ್ಲೆಗೆ ಪ್ರಥಮ ಸ್ಥಾನ ಪಡೆದುಕೊಂಡಿದ್ದಾನೆ ಆ ಒಂದು ವಿಶಿಷ್ಟ ಸಾಧಕನ ಹೆಸರನ್ನು ಪ್ರೊ.ಬಸವರಾಜ ಕೊಣ್ಣೂರ ತಮ್ಮ ಮಹಾವಿದ್ಯಾಲಯದ ವರ್ಗ ಕೋಣೆಗೆ ದರ್ಶನ ತೇರದಾಳ ವಿಭಾಗ ಎಂದು ನಾಮಕರಣ ಮಾಡಿದರು. ನಾಮ ಫಲಕವನ್ನು ಸಾಧಕ ವಿದ್ಯಾರ್ಥಿಯ ಕೈಯಿಂದಲೇ ಅನಾವರಣಗೊಳಿಸಲಾಯಿತು. ಪ್ರೊ. ಬಸವರಾಜ ಕೊಣ್ಣೂರ




ಮಾತನಾಡುತ್ತ, ನನ್ನ ದೃಷ್ಟಿಯಲ್ಲಿ ಒಬ್ಬ ಸಾಧಕ ವಿದ್ಯಾರ್ಥಿ ನಾಡಿನ ಒಬ್ಬ ಶ್ರೇಷ್ಠ ಕವಿ, ಶ್ರೇಷ್ಠ ವಿಜ್ಞಾನಿಗಿಂತಲೂ ಮಿಗಿಲಾದವನು ಹಾಗಾಗಿ ವಿದ್ಯಾರ್ಥಿ ದರ್ಶನ ಹೆಸರು ನಾಮಕರಣ ಮಾಡಿದ್ದೇವೆ. ಇನ್ನು ಮುಂದೆ ನಮ್ಮ ಮಹಾವಿದ್ಯಾಲಯದಲ್ಲಿ ದರ್ಶನನ ಹೆಸರು ಶಾಶ್ವತವಾಗಿ ಉಳಿಯುವುದು ಅಷ್ಟೇ ಅಲ್ಲದೆ ಈ ಹಿಂದೆ ಸಾಧಕ ವಿದ್ಯರ್ಥಿಗಳ ಹೆಸರನ್ನು ನಾಮರಣ ಮಾಡಲಾಗಿದೆ ಉಳಿದ ವಿದ್ಯಾರ್ಥಿಗಳಿಗೂ ಈ ವಿದ್ಯಾರ್ಥಿಯ ಸಾಧನೆ ಪ್ರೇರಣಾದಾಯಕವಾದದ್ದು ಎಂದು ಸಂತಸವನ್ನು ವ್ಯಕ್ತಪಡಿಸಿದರು.

ಇನ್ನು ಮುಂದೆ ಪ್ರತಿ ವರ್ಷ ನೀಟ್/ಜೆ ಇ ಇ /ಕೆ ಸಿಇಟಿ ಹಾಗೂ ಥಿಯರಿಯಲ್ಲಿ ಹೆಚ್ಚು ಅಂಕ ಪಡೆಯುವಂತ ವಿದ್ಯಾರ್ಥಿಯ ಹೆಸರನ್ನು ವರ್ಗಕೋಣೆಗೆ ಇಡುವಂತದ್ದು ನಿರಂತರವಾಗಿ ನಡೆಯುತ್ತದೆ ಎಂದು ಸಂಸ್ಥಾಪಕ ಪ್ರಾಚಾರ್ಯರಾದ ಪ್ರೊ.ಬಸವರಾಜ ಕೊಣ್ಣೂರ ಹೇಳಿದರು.

ಈ ಸಂದರ್ಭದಲ್ಲಿ ಉಪಪ್ರಾಚಾರ್ಯರಾದ ಶಿವಾನಂದ ಕಂದಗಲ್ ಆಡಳಿತಾಧಿಕಾರಿ ಶೀತಲ ಕೊಣ್ಣೂರ ಹಾಗೂ ಉಪನ್ಯಾಸಕ ವರ್ಗದವರು ಇದ್ದರು.

# ಬಿಜೆಪಿ ಅಭ್ಯರ್ಥಿ ಪರ ಭರ್ಜರಿ ರೋಡ್ ಶೋ

## ಬಿಜೆಪಿ ಅಭ್ಯರ್ಥಿ ರಮೇಶ ಜಿಗಜಿಣಗಿ ನಾಮಪತ್ರ ಸಲ್ಲಿಕೆ । ಯತ್ನಾಳ್, ಸಿ.ಟಿ. ರವಿ ಸೇರಿದಂತೆ ಮುಖಂಡರುಗಳು ಸಾಥ್

**ವಿಜಯಪುರ :** ಲೋಕಸಭಾ ಚುನಾವಣೆಯು ರಾಜ್ಯದಲ್ಲಿ ರಂಗೇರುತ್ತಿದ್ದು, ಅದರಂತೆ ವಿಜಯಪುರದಲ್ಲೂ ಇಂದು ಮಂಗಳವಾರ ಇಲ್ಲಿಯ ಬಿಜೆಪಿ ಅಭ್ಯರ್ಥಿ ರಮೇಶ ಜಿಗಜಿಣಗಿ ನಾಮಪತ್ರ ಸಲ್ಲಿಕೆಗೆ ಬೃಹತ್ ರ್ಯಾಲಿ ನಡೆಸಿದರು.

ನಗರದ ಛತ್ರಪತಿ ಶಿವಾಜಿ ಮಹಾರಾಜ್ ರವರ ವೃತ್ತದಿಂದ ಗಾಂಧೀ ವೃತ್ತ, ಬಸವೇಶ್ವರ ವೃತ್ತದ ಮೂಲಕ ಅಂಬೇಡ್ಕರ ವೃತ್ತದ ವರೆಗೆ ದಾರಿಯೂದ್ದಕ್ಕೂ ಕೇಸರಿ ಮಯಗೊಂಡಿತ್ತು. ಜಿಲ್ಲೆಯ ವಿವಿಧ ಹಳ್ಳಿಗಳಿಂದ ಆಗಮಿಸಿದ್ದ ಬಿಜೆಪಿ ಹಾಗೂ ಜೆಡಿಎಸ್ ಮುಖಂಡರಿಂದ ಭರ್ಜರಿ ರ್ಯಾಲಿ ನಡೆಸಿ, ಮತ್ತೊಮ್ಮೆ ಮೋದಿ ಘೋಷಣೆ ಮೊಳಗಿದವು. ರಸ್ತೆಯುದ್ದಕ್ಕೂ ಜೈಶ್ರೀರಾಮ, ಭಾರತ್ ಮಾತಾಕೀ ಜೈ, ಜೈ ಬಿಜೆಪಿ, ಜೈ ಮೋದಿ ಜಯಘೋಷಗಳು ಕೇಳಿಬಂದವು. ನಂತರ ನಗರದ ದರಬಾರ್ ಹೈಸ್ಕೂಲ್ ಮೈದಾನದಲ್ಲಿ ನಡೆದ ಬೃಹತ್ ಬಹಿರಂಗ ಸಭೆ ಜರುಗಿತು.

ಈ ಸಂಧರ್ಭದಲ್ಲಿ ವಿಜಯಪುರ ನಗರ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಬಿಜೆಪಿಯ ಮಾಜಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ, ಇಂಡಿ ಜೆಡಿಎಸ್ ಮುಖಂಡ ಬಿ.ಡಿ. ಪಾಟೀಲ್, ಕಲಬುರಗಿ ಸಂಸದ ಉಮೇಶ ಜಾಧವ,ಮಾಜಿ ಸಚಿವ ಹಾಲಪ್ಪ ಆಚಾರ್, ಬಿಜೆಪಿ ಜಿಲ್ಲಾಧ್ಯಕ್ಷ ಆರ್. ಎಸ್. ಪಾಟೀಲ್ ಕೂಚಬಾಳ ಹಾಜರಿದ್ದರು.



ಲೋಕಸಭಾ ಚುನಾವಣೆಯ ಭಾರತೀಯ ಜನತಾ ಪಕ್ಷದ ಅಭ್ಯರ್ಥಿ ರಮೇಶ ಜಿಗಜಿಣಗಿ ಅವರು ಚುನಾವಣಾಧಿಕಾರಿಗಳೂ ಆದ ಜಿಲ್ಲಾಧಿಕಾರಿಗಳಿಗೆ ನಾಮಪತ್ರ ಸಲ್ಲಿಸಲ್ಲಿಸಿದರು.

**ದೇಶಕ್ಕೆ ಮೋದಿ, ವಿಜಯಪುರಕ್ಕೆ ಜಿಗಜಿಣಗಿ:**

ವಿಜಯಪುರದಲ್ಲಿ ನಡೆದ ಬಿಜೆಪಿ ಬಹಿರಂಗ ಸಭೆಯನ್ನುದ್ದೇಶಿಸಿ ಮಾತನಾಡಿದ ಅವರು, ಕಾಂಗ್ರೆಸ್ ನಲ್ಲಿ ಮದುವೆ ಗಂಡು ಇಲ್ಲ, ಯಾರು ಗಂಡು ಎಂದು ಅವರಿಗೆ ಗೊತ್ತಿಲ್ಲ. ಮದುವೆಗೆ ಗಂಡೇ ಇಲ್ಲದೇ ಮದುವೆ ಹೇಗೆ. ರಾಹುಲ್ ಗಾಂಧಿ ಮದುವೆ ಗಂಡು ಎಂದರೆ ಓಡಿ ಹೋಗುತ್ತಾರೆ.

ನಮ್ಮ ಗಂಡು ನರೇಂದ್ರ ಮೋದಿ. ಹತ್ತಾರು ಅಭಿವೃದ್ಧಿ ಯೋಜನೆ ಮಾಡಿರುವ ಗಂಡು ಮೋದಿ. ಹತ್ತು ಕೆಜಿ ಅಕ್ಕಿ ಎಲ್ಲಿ, ಮೋದಿ ಕೊಡುವ ಅಕ್ಕಿ ಬಿಟ್ಟು ಎಲ್ಲಿದೆ ಅಕ್ಕಿ ಎಂದು ಸಿದ್ದರಾಮಯ್ಯ ಮಾತನಾಡುವ ರೀತಿ ಮಿಮಿಕ್ರಿ ಮಾಡಿ ಸಿ ಟಿ ರವಿ ಟಾಂಗ್ ಕೊಟ್ಟರು.



ಮೋದಿ ಗ್ಯಾರಂಟಿ ದೇಶ ಉಳಿಸುತ್ತದೆ. ಅಮೇರಿಕದಲ್ಲಿ ಕೊರೋನಾ ಲಸಿಕೆಗೆ ಒಂದೂವರೆ ಲಕ್ಷ ರೂಪಾಯಿ. ಮೋದಿ ನಮಗೆ ಉಚಿತ ಲಸಿಕೆ ನೀಡಿದ್ದಾರೆ. ಅವರ ಋಣ ತೀರಿಸಬೇಕಿದೆ. ಕ್ವಾಟರ್ ಮದ್ಯದ ದರ 50 ರೂಪಾಯಿ ಏರಿಕೆ ಮಾಡಿದರು. ಮಧ್ಯ ದರ ಏರಿಕೆ ಮಾಡಿದ ಹಣವನ್ನು ಮಹಿಳೆಯರಿಗೆ ನೀಡಲಾಗಿದೆ. ಬಸ್ ದರ ಏರಿಕೆ, ಆರ್ ಟಿ ಸಿ ಪಹಣಿ ದರ, ವಿದ್ಯುತ್ ಸಂಪರ್ಕ ಸಹಾಯ ಧನ ಬಂದ್ ಮಾಡಿದ್ದಾರೆ. ಗಂಡದ್ದು ಕಿತ್ತು ಹೆಂಡತಿಗೆ ಕೊಡುತ್ತಿದ್ದಾರೆ. ಮೇಲೆ ನುಡಿದಂತೆ ನಡೆದಿದ್ದೇವೆ ಎಂದು ಸಿದ್ದರಾಮಯ್ಯ ಮಾತನಾಡುತ್ತಾರೆ ಸಿದ್ದರಾಮಯ್ಯ ಮಾತನಾಡೋ ಶೈಲಿಯಲ್ಲಿ ಅಣಕಿಸಿ ಗ್ಯಾರಂಟಿ ಯೋಜನೆಗಳ ಬಗ್ಗೆ ತರಾಟೆಗೆ ತೆಗೆದುಕೊಂಡರು.



**ಬಾ ನಾನೇ ನಿಲ್ಲುತ್ತೇನೆ:**

ಬಿಜೆಪಿ ಅಭ್ಯರ್ಥಿ ರಮೇಶ್ ಜಿಗಜಿಣಗಿ ನಾಮಪತ್ರ ಸಲ್ಲಿಕೆ ಬಳಿಕ ಬಹಿರಂಗ ಸಭೆಯಲ್ಲಿ ಸಾರ್ವಜನಿಕರನ್ನು ಉದ್ದೇಶಿಸಿ ನಗರ ಶಾಸಕ ಬಸನಗೌಡ ಪಾಟೀಲ್ ಯತ್ನಾಳ ಮಾತನಾಡಿ ಬಿಜೆಪಿ ಅಭ್ಯರ್ಥಿ ರಮೇಶ ಜಿಗಜಿಣಗಿ ಗೆಲ್ಲಿಸಲು ಕರೆ ನೀಡಿದರು.

1999 ರಲ್ಲಿ ಮೊದಲ ಬಾರಿ ಜಿಲ್ಲೆಯ ಲೋಕಸಭಾ ಸದಸ್ಯನಾಗಿ ಆಯ್ಕೆಯಾಗಿದ್ದೇ. ಹಳ್ಳಿ ಹಳ್ಳಿಗಳಲ್ಲಿ ನನ್ನ ಬೋರ್ಡ್ ಇಂದಿಗೂ ಇವೆ. ನನ್ನ ಹಾಗೂ ಜಿಗಜಿಣಗಿ ನಡುವೆ ಜಗಳ ಇದೆ ಎಂದು ದೇಶಕ್ಕೆ, ಸನಾತನ ಧರ್ಮಕ್ಕೆ ಮೋಸ ಆಗಬಾರದು. ಇಂದು ಮೋದಿ ಪ್ರಧಾನಿ ಮೋದಿ ಆಗದಿದ್ದರೆ ದೇಶಕ್ಕೆಅಪಾಯವಿದೆ. ನಾವು ಬಿಜೆಪಿಯಿಂದ ಎಲ್ಲಾ ಅನುಕೂಲ ಮಾಡಿಕೊಂಡಿದ್ದೇವೆ. ಕೇಂದ್ರ ಸಚಿವರು, ಸಂಸದರು ಶಾಸಕರು ಆಗಿದ್ದೇವೆ. ಪಕ್ಷಕ್ಕೆ ದ್ರೋಹ ಮಾಡಿ ಅಲ್ಲೊಂದು ಪಕ್ಷ ಇಲ್ಲೊಂದು ಪಕ್ಷ ಮಾಡಿದವರಿಗೆ ಜನ ವೋಟ್ ಹಾಕಲ್ಲ. ವಿಜಯಪುರ ನಗರ ಕ್ಷೇತ್ರದಲ್ಲಿ ಕಳೆದ ಚುನಾವಣೆಯಲ್ಲಿ ನನ್ನ ವಿರುದ್ದವೂ ಬಹಳ ಷಡ್ಯಂತ್ರ ಮಾಡಿದರು. ಯಾರು ಏನೇ ಮಾಡಿದರೂ ನನ್ನ ಗೆಲುವು



ತಡೆಯಲು ಆಗಲಿಲ್ಲ. ನನ್ನ ಗೆಲುವಿಗೆ ನಿಷ್ಠಾವಂತ ಕಾರ್ಯಕರ್ತರೇ ಕಾರಣ ಎಂದರು.

ನಮ್ಮ ಸಿದ್ದೇಶ್ವರ ಸಂಸ್ಥೆಯ ಸಕ್ಕರೆ ಕಾರ್ಖಾನೆಗೆ ನೋಟೀಸ್ ಕೊಟ್ಟು ಕಿರಿಕ್ ಮಾಡಿದ್ದೀರಿ. ಅದಕ್ಕೆ ನಿನ್ನೆ ಹೈಕೋರ್ಟ್ ಛೀಮಾರಿ ಮಾಡಿದೆ. ಯಾರ ಯಾರ ತಿಂಡಿ ಇದೆ ವಿಜಯಪುರಕ್ಕೆ ಬಂದು ನಿಲ್ಲಿ.



ಯಾರ ತಿಂಡಿಯೂ ನಡೆಯಲ್ಲ. ಇನ್ನೂ ಇಪ್ಪತ್ತು ವರ್ಷ ನನ್ನ ಏನೂ ಮಾಡಲಾಗಲ್ಲ.

2040 ಕ್ಕೆ ತ್ರಿವರ್ಣ ಧ್ವಜ ಹಾಕಿಕೊಂಡು ಮೇಲೆ ಹೋಗುತ್ತೇನೆ ಎಂದು ಯತ್ನಾಳ ಖಡಕ್ ಮಾತುಗಳಾಡಿದರು.

# ಚಿಕಿತ್ಸೆ ಫಲಿಸಿದೆ ಬಿಸಿಯೂಟ ಕಾರ್ಯಕರ್ತೆ ಸಾವು



**ಗೊಳಸಂಗಿ :** ವರ್ಷದ ಹಿಂದೆ ರಸ್ತೆ ಅಪಘಾತವೊಂದರಲ್ಲಿ ಕಾಲಿಗೆ ತೀವ್ರವಾಗಿ ಪೆಟ್ಟಾಗಿ ಬದುಕುಳಿದಿದ್ದ ಗ್ರಾಮದ ಸರ್ಕಾರಿ ಕನ್ನಡ ಗಂಡು ಮಕ್ಕಳ ಮಾದರಿ ಪ್ರಾಥಮಿಕ ಶಾಲೆಯ ಬಿಸಿಯೂಟ ಕಾರ್ಯಕರ್ತೆ ಸಾಯಿರಾಬಾನು ಬಾಬು ಬೀಳಗಿ ಕೊನೆಗೂ ಮಂಗಳವಾರ ಬೆಳಿಗ್ಗೆ ಮಹಾರಾಷ್ಟ್ರದ ಮೀರಜ್‌ನ ಖಾಸಗಿ ಆಸ್ಪತ್ರೆಯೊಂದರಲ್ಲಿ ಸಾವನ್ನಪ್ಪಿದರು.

ರಸ್ತೆ ಅಪಘಾತದಲ್ಲಿ ತೀವ್ರವಾಗಿ ಪೆಟ್ಟಾಗಿದ್ದ ಕಾಲಿನೊಳಗೆ ರಾಡು ಹಾಕಲಾಗಿತ್ತು. ಮಂಗಳವಾರ ಬೆಳಿಗ್ಗೆ ಕಾಲೊಳಗಿದ್ದ ರಾಡನ್ನು ಹೊರ ತೆಗೆದಾದ ಬಳಿಕ ಗಾಬರಿಗೊಂಡ ಸಾಯಿರಾಬಾನು ಹೃದಯಾಘಾತಕ್ಕೆ ಒಳಗಾಗಿ ಸಾವನ್ನಪ್ಪಿದ್ದಾರೆ.

ಮೃತರಿಗೆ ಹಿರಿಯ ರಂಗ ಕಲಾವಿದ, ಪತಿ ಬಾಬು ಬೀಳಗಿ, ಬೆಂಗಳೂರು ಇಸ್ರೋ ಸಂಸ್ಥೆಯ ಯೋಜನಾ ಸಹಾಯಕ, ಪುತ್ರ ಸೈಫಲಿ ಬೀಳಗಿ ಮತ್ತು ಪುತ್ರಿ ಅಪಾರ ಬಂಧು-ಬಳಗ ಇರುವರು.

# ಮತದಾನ ಜಾಗೃತಿ: 10 ಅಡಿ ಉದ್ದದ ಬಲೂನ್ ಅಳವಡಿಕೆ




**ವಿಜಯಪುರ :** ವಿಜಯಪುರ ಮಹಾನಗರ ಪಾಲಿಕೆಯ ಕಚೇರಿಯ ಮೇಲೆ ಲೋಕಸಭಾ ಚುನಾವಣೆ 2024ರ ಮತದಾನ ಜಾಗೃತಿ ಕುರಿತು 10 ಅಡಿ ಉದ್ದ 10 ಅಡಿ ಅಗಲದ ಬಲೂನ್‌ನ್ನು ಸ್ಥಾಪಿಸಲಾಯಿತು.

ಈ ಸಂದರ್ಭ ಸಹಾಯಕ ಚುನಾವಣಾ ಅಧಿಕಾರಿಗಳು ವಿಜಯಪುರ ನಗರ ಲೋಕಸಭಾ ಮತಕ್ಷೇತ್ರ ಹಾಗೂ ಮಹಾನಗರ ಪಾಲಿಕೆ ಆಯುಕ್ತರು ಅಶಾದ ಉರ್ ರೆಹಮಾನ್ ಶರೀಫ್, ಮಹಾನಗರ ಪಾಲಿಕೆಯ ಉಪ ಆಯುಕ್ತ ಮಹಾವೀರ ಬೋರಣ್ಣವರ, ಸಹಾಯಕ ನಗರ ಯೋಜನಾಧಿಕಾರಿ ಲಕ್ಷ್ಮಣ್ ಮೊರೆ, ವಲಯ 3 ಕಂದಾಯ ಅಧಿಕಾರಿ ರವಿ ಶರಶಾಡ ಪರಿಷತ್ ಕಾರ್ಯದರ್ಶಿ ರವಿ ರಂಗಸುಬೆ ಸೇರಿದಂತೆ ಇತರರು ಉಪಸ್ಥಿತರಿದ್ದರು.

# ಸಾಮಾಜಿಕ ಸಮಾನತೆಯ ಹರಿಕಾರ ಡಾ. ಬಿ.ಆರ್. ಅಂಬೇಡ್ಕರ: ಪ್ರಾಚಾರ್ಯ ಡಾ. ಅರುಣಕುಮಾರ ಗಾಳಿ



**ಬಾಗಲಕೋಟೆ :** ಸಾಮಾಜಿಕ ಸಮಾನತೆಗೆ ಶಿಕ್ಷಣವೇ ಮೂಲಮಂತ್ರವಾಗಬೇಕು. ಶಿಕ್ಷಣಜ್ಞಾನದಿಂದಲೇ ಸಮಾಜದಲ್ಲಿರುವ ಮೌಢ್ಯಗಳನ್ನು ಹೊಡೆದೋಡಿಸಿ, ದೀನ ದಲಿತರ ಮತ್ತು ಶೋಷಿತರನ್ನುಉದ್ಧಾರ ಮಾಡಲು ಸಾಧ್ಯವಿದೆ ಎಂದು ಭಾರತರತ್ನಡಾ.ಬಾಬಾಸಾಹೇಬ್‌ಅಂಬೇಡ್ಕರಅವರುಜಗತ್ತಿಗೆ ಸಾರಿ ಹೇಳುವ ಮೂಲಕ ವಿಶ್ವ ಮಾನವರಾಗಿದ್ದಾರೆ. ಡಾ.ಅಂಬೇಡ್ಕರಅವರು ಸಾಮಾಜಿಕಸಮಾನತೆಯಹರಿಕಾರರಾಗಿದ್ದಾರೆಎಂದುಪ್ರಾಚಾರ್ಯಡಾ. ಅರುಣಕುಮಾರ ಗಾಳಿ ಅವರು ಹೇಳಿದರು. ಅವರುಬಾಗಲಕೋಟೆ ನವನಗರದ ಸರ್ಕಾರಿ ಪ್ರಥಮದರ್ಜೆಕಾಲೇಜಿನಲ್ಲಿಸಂವಿಧಾನ ಶಿಲ್ಪಿ ಡಾ.ಬಾಬಾಸಾಹೇಬ್‌ಅಂಬೇಡ್ಕರಅವರಜಯಂತಿಕಾರ್ಯಕ್ರಮದಲ್ಲಿ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ, ಪುಷ್ಪ ಅರ್ಪಿಸಿ ಮಾತನಾಡಿದರು.

ಮುಂದುವರಿದು ಮಾತನಾಡಿವಿಶ್ವದಲ್ಲಿಯೇ ನಮ್ಮ ಭಾರತದ ಸಂವಿಧಾನವು ಸರ್ವಶ್ರೇಷ್ಠವಾಗಿದ್ದು. ಆ ಸಂವಿಧಾನ ಶಿಲ್ಪಿ ಭಾರತರತ್ನಡಾ.ಬಾಬಾ ಸಾಹೇಬ್‌ಅಂಬೇಡ್ಕರಅವರಘನವಾದ ವ್ಯಕ್ತಿತ್ವ, ಸರಳತೆಯ ಬದುಕು, ದಿವ್ಯ ಪಾಂಡಿತ್ಯವನ್ನು ಹೊಂದಿದ್ದರು, ಡಾ.ಅಂಬೇಡ್ಕರಅವರ ಚಿಂತನೆಗಳಲ್ಲಿರುವ ಸಾಮಾಜಿಕ ಮೌಲ್ಯಗಳು ನಮ್ಮ ಪ್ರಜಾಪ್ರಭುತ್ವದಘನತೆಯನ್ನು ಹೆಚ್ಚಿಸಿವೆ. ಅವರುಹೇಳಿರುವ ಸಾಮಾಜಿಕಸಮಾನತೆಯ ಮೌಲ್ಯಗಳನ್ನು ನಾವು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದರು.

ಮುಖ್ಯ ಅತಿಥಿಗಳಾಗಿ ಕಲಾದಗಿ ಸ.ಪ್ರ.ದ. ಕಾಲೇಜಿನರಾಜ್ಯಶಾಸ್ತ್ರ ವಿಭಾಗದಸಹಾಯಕಪ್ರಾಧ್ಯಾಪಕರಾದಡಾ.ಸಂಪತ್ತಲಮಾಣಿಅವರುಡಾ. ಅಂಬೇಡ್ಕರಅವರಜೀವನ ಮತ್ತು ಸಾಧನೆಕುರಿತು ಮಾತನಾಡಿದರು.

ಕಾರ್ಯಕ್ರಮದಲ್ಲಿಐಕ್ಯೂಎಸಿ ಸಂಚಾಲಕರಾದಡಾ.ಅಜೀತ ನಾಗರಾಳೆ, ಡಾ.ಜಿ.ಜಿ.ಹಿರೇಮಠ, ಡಾ.ಸುಮಂಗಲಾ ಮೇಟಿ, ಡಾ.ಚಂದ್ರಶೇಖರ ಕಾಳನ್ನವರ, ಪ್ರೊ.ಪರಸಪ್ಪ ತಳವಾರ, ರಾಘವೇಂದ್ರ ಬಡಿಗೇರ, ನಾರಾಯಣ ಪತ್ತಾರ, ದೇವೇಂದ್ರ, ತಾಯಕ್ಕ ಚಲವಾದಿ ಸೇರಿದಂತೆಕಾಲೇಜಿನ ಬೋಧಕ-ಬೋಧಕೇತರ ಸಿಬ್ಬಂದಿಯವರು ಮತ್ತು ವಿದ್ಯಾರ್ಥಿಗಳು ಡಾ.ಅಂಬೇಡ್ಕರಜಯಂತಿಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

# ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮಕ್ಕೆ ನಾಮ ನಿರ್ದೇಶನರಾಗಿ ನೇಮಕ

**ಜಮಖಂಡಿ :** ಕರ್ನಾಟಕ ಸರಕಾರ ಅಲ್ಪಸಂಖ್ಯಾತರ ಕಲ್ಯಾಣ ಹಜ್ ಮತ್ತು ವಕ್ಪ ಇಲಾಖೆ ಇದರ ಆದಿನದಲ್ಲಿ ಬರುವ ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮಕ್ಕೆ ನಾಮ ನಿರ್ದೇಶನರಾಗಿ ನೇಮಕಗೊಂಡಿದ್ದಾರೆ. ಸಮೀರ ಕಂಗನೋಳ್ಳಿ ಉಸ್ತಾಹಿ ಯುವ ಇವರು ನಡೆದುಕೊಂಡ ಬರುವ ಸಾಮಾಜಿಕ,ಶೈಕ್ಷಣಿಕ, ರಾಜಕೀಯ ಚಟುವಟಿಕೆ ಕಾರ್ಯ ಗಣನಿಯ ಸೇವೆ ಗಮನಿಸುವ ಮೂಲಕ ಸಮೀರ ಕಂಗನೋಳ್ಳಿರನ್ನು ಸರಕಾರದ ಆದೀನ ಕಾರ್ಯದರ್ಶಿ ಅಲ್ಪಸಂಖ್ಯಾತರ ಕಲ್ಯಾಣ ಹಜ್ ವಕ್ಪ ಇಲಾಖೆ ನಾಗರಾಜ ಅವರು ಆದೇಶ ಹೊರಡಿಸಿದ್ದಾರೆ. ಇವರ ಬೆನ್ನಲೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅಲ್ಪಸಂಖ್ಯಾತರ ಕಲ್ಯಾಣ ಸಚಿವ ಜಮೀರ ಅಹ್ಮದ ಹಾಗೂ ಸ್ಥಳೀಯ ಮಾಜಿ ಶಾಸಕ ಆನಂದ ನ್ಯಾಮಗೌಡ ಅವರ ನೇಮಕಕ್ಕೆ ನಗರ ಹಾಗೂ ಗ್ರಾಮದ ಕಾಂಗ್ರೇಸ ಪಕ್ಷದ ಮುಖಂಡ ಹಾಗೂ ಹಿರಿಯರ ಹಾಗೂ ಯುವಕರು ಖುಷಿ ಪಟ್ಟಿದ್ದಾರೆ.

# ಮುನಿರಾಬಾದ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಸ್ವೀಪ್ ಕಾರ್ಯಕ್ರಮ




**ಕೊಪ್ಪಳ :** ಲೋಕಸಭಾ ಸಾರ್ವತ್ರಿಕ ಚುನಾವಣೆ ನಿಮಿತ್ಯ ಮತದಾರರಲ್ಲಿ ಜಾಗೃತಿ ಮೂಡಿಸಲು ಕೊಪ್ಪಳ ತಾಲೂಕಿನ ಮುನಿರಾಬಾದ ಡ್ಯಾಂ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಬುಧವಾರದಂದು ಆರೋಗ್ಯ ಇಲಾಖೆಯ ಸಿಬ್ಬಂದಿಗಳು, ಆಶಾ ಕಾರ್ಯಕರ್ತೆಯರಿಗೆ ಮತದಾನ ಸ್ವೀಪ್ ಕಾರ್ಯಕ್ರಮ ಜರುಗಿತು.

ತಾಲೂಕ ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಗಂಗಮ್ಮ ಕಳಕಾಪುರ ಮಾತನಾಡಿ ಮೇ-7 ರಂದು ಜರುಗುವ ಲೋಕಸಭಾ ಚುನಾವಣೆಯಲ್ಲಿ ಕಡ್ಡಾಯವಾಗಿ ಮತಗಟ್ಟೆ ಕೇಂದ್ರಕ್ಕೆ ಹೋಗಿ ಮತ ಚಲಾಯಿಸುವದರ ಮೂಲಕ ಸುಭದ್ರ ದೇಶವನ್ನಾಗಿ ನಿರ್ಮಿಸೋಣ. ಮತದಾನ ಎನ್ನುವುದು ಪ್ರಜಾಪ್ರಭುತ್ವದ ಹಬ್ಬವಾಗಿದೆ ಎಂದರು.

ದೇಶದ ಅಭಿವೃದ್ಧಿ ಮಾಡುವ, ಸೂಕ್ತ ವ್ಯಕ್ತಿ ಎನ್ನುವ ಬಗ್ಗೆ ಆಲೋಚನೆ ಮಾಡಿ ಮತದಾನ ಮಾಡಬೇಕು. ನಾವು ಹಾಕುವ ಒಂದು ಓಟು ಇಡೀ ದೇಶದ ಚಿತ್ರಣ ಬದಲಾಯಿಸುತ್ತದೆ. ಚುನಾವಣೆ ಸಮಯದಲ್ಲಿ ಆಸೆ, ಆಮಿಷಗಳು ಅಪಾಯಕಾರಿ ರೀತಿಯಲ್ಲಿ ಬರುವುದನ್ನು ನಾವು ತಡೆಯಬೇಕು. ಸ್ವೀಪ್ ಕಾರ್ಯಕ್ರಮದಲ್ಲಿ ಸೇರಿರುವ ಮತದಾರರು ನಿಮ್ಮ ಕುಟುಂಬದ 18 ವರ್ಷ ಮೇಲ್ಪಟ್ಟ ಸದಸ್ಯರು ಮತ ಚಲಾಯಿಸುವ ಮೂಲಕ ದೇಶಕ್ಕೆ ಸುಭದ್ರ ಆಡಳಿತ ಒದಗಿಸಲು ಕೈ ಜೋಡಿಸೋಣ ಎಂದರು. ನಂತರ ಮತದಾರರ ಪ್ರತಿಜ್ಞಾ ವಿಧಿಯನ್ನು ಬೋಧಿಸಲಾಯಿತು. ಸ್ವೀಪ್ ಕಾರ್ಯಕ್ರಮದಲ್ಲಿ ವೈದ್ಯಾಧಿಕಾರಿಗಳಾದ ಡಾ॥ಕೆ.ಎಚ್.ತೋಗರಿ, ಡಾ॥ ರಾಜಲಕ್ಷ್ಮೀ, ಡಾ॥ಶ್ವೇತಾ, ಡಾ॥ರಾಜಶೇಖರ, ಆರೋಗ್ಯ ಇಲಾಖೆಯ ಸಿಬ್ಬಂದಿಗಳು, ಆಶಾ ಕಾರ್ಯಕರ್ತೆಯರು ಹಾಜರಿದ್ದರು.

# ಮೆಹಂದಿ ಹಾಗೂ ರಂಗೋಲಿಯಲ್ಲಿ ಚಿತ್ತಾರಗೊಂಡ ಮತದಾನ ಜಾಗೃತಿ



**ಧಾರವಾಡ :** ಜಿಲ್ಲೆಯಾದ್ಯಂತ ನಡೆಯುತ್ತಿರುವ ಮತದಾರರ ಜಾಗೃತಿ ಚಟುವಟಿಕೆಗಳು ದಿನೇ ದಿನೇ ರಂಗು ಪಡೆಯುತ್ತಿವೆ. ಬಸ್ ನಿಲ್ದಾಣಕ್ಕೆ ಆಗಮಿಸುವ ಪ್ರಯಾಣಿಕರಲ್ಲಿ ಹಾಗೂ ಹೊಸದಾಗಿ ಮತದಾನಕ್ಕೆ ಅರ್ಹತೆ ಪಡೆದುಕೊಂಡಿರುವ ಯುವ ಜನರನ್ನು ಮತದಾನಕ್ಕೆ ಪ್ರೋತ್ಸಾಹಿಸುವ ಉದ್ದೇಶದಿಂದ ಜಿಲ್ಲಾ ಸ್ವೀಪ್ ಸಮಿತಿ ನಡೆಸುತ್ತಿರುವ ವಿಶಿಷ್ಟ ಆಕರ್ಷಣೀಯ ಕಾರ್ಯಕ್ರಮಗಳು ಚುನಾವಣಾ ಹಬ್ಬದ ವಾತಾವರಣ ನಿರ್ಮಿಸುತ್ತಿವೆ. ಬಸ್ ನಿಲ್ದಾಣದಲ್ಲಿರುವ ಪ್ರಯಾಣಿಕರಲ್ಲಿ ಮತದಾನದ ಜಾಗೃತಿ ಮೂಡಿಸಲು ಮೆಹಂದಿ ಕಾರ್ಯಾಗಾರ ಹಾಗೂ ರಂಗೋಲಿ ಸ್ಪರ್ಧೆಗಳನ್ನು ಧಾರವಾಡದ ಹೊಸ ಬಸ್ ನಿಲ್ದಾಣದಲ್ಲಿ ಏರ್ಪಡಿಸಲಾಗಿತ್ತು.

ಜಿಲ್ಲಾ ಸ್ವೀಪ್ ಸಮಿತಿ ಅಧ್ಯಕ್ಷೆಯಾಗಿರುವ ಜಿಲ್ಲಾ ಪಂಚಾಯತ ಸಿಇಓ ಸ್ವರೂಪ ಟಿ.ಕೆ. ಜಾಗೃತಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಧಾರವಾಡ ನಗರದ ಅಂಗನವಾಡಿ ಹಾಗೂ ಆಶಾ ಕಾರ್ಯಕರ್ತೆಯರು ಮೆಹಂದಿ ಹಾಗೂ ರಂಗೋಲಿ ಸ್ಪರ್ಧೆಗಳಲ್ಲಿ ಪಾಲ್ಗೊಂಡಿದ್ದರು.

ಜಿಲ್ಲಾ ಪಂಚಾಯತ ಮುಖ್ಯ ಯೋಜನಾಧಿಕಾರಿ ದೀಪಕ ಮಡಿವಾಳರ,

ಡಿಎಚ್‌ಓ. ಡಾ. ಶಶಿ ಪಾಟೀಲ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕಿ ಪದ್ಮಾವತಿ ಜಿ. ಉಪಸ್ಥಿತರಿದ್ದರು.

# ಮಾವು: ಕೊಯ್ಲು ಮತ್ತು ಕೊಯ್ಲೋತ್ತರ ನಿರ್ವಹಣೆ ಕುರಿತು ರೈತರಿಗೆ ಸಲಹೆಗಳು

**ಕೊಪ್ಪಳ :** ಮಾವು ಬೆಳೆಯಲ್ಲಿ ಕೊಯ್ಲು ಮತ್ತು ಕೊಯ್ಲೋತ್ತರ ನಿರ್ವಹಣೆ ಕುರಿತು ಕೊಪ್ಪಳದ ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರದಿಂದ ರೈತರಿಗೆ ಸಲಹೆಗಳನ್ನು ನೀಡಲಾಗಿದೆ.

ಈ ಬಾರಿ ತಡವಾಗಿ ಮಾವಿನಲ್ಲಿ ಹೂ ಕಚ್ಚಿ-ನಂತರ ಕೀಟ ರೋಗಗಳ ಬಾಧೆಯಿಂದಾಗಿ ಹೂ/ಹೀಚು ಉದುರಿ ಹೋಗಿ ರೈತರಿಗೆ ನಷ್ಟ ಆಗುವಂತಾಯಿತು. ನಂತರದ ಏಪ್ರಿಲ್ ತಿಂಗಳಿನಲ್ಲಿ ಅಧಿಕ ತಾಪಮಾನದಿಂದಾಗಿಯೂ ಕಾಯಿ ಹೀಚು ಉದುರಿ ರೈತರಿಗೆ ಆತಂಕ ಉಂಟಾಯಿತು. ಈಗ ಮಾವು ಕಟಾವಿಗೆ ಬರುತ್ತಿದ್ದು, ಮಾವು ಬೆಳೆಗಾರರು ಕೆಲವು ತಂತ್ರಜ್ಞಾನಗಳನ್ನು ಅಳವಡಿಸಿಕೊಂಡು ಕೊಯ್ಲು ಮತ್ತು ಕೊಯ್ಲಿನ ನಂತರದ ನಿರ್ವಹಣೆ ಮಾಡಿದಲ್ಲಿ ಅಲ್ಪ ಸ್ವಲ್ಪ ಬೆಳೆಯಿಂದ ಸ್ವಲ್ಪ ಆದಾಯ ಪಡೆಯಬಹುದಾಗಿದೆ. ಹೂ/ಕಾಯಿ ಉದುರುತ್ತಿರುವಾಗ ಮತ್ತು ಜಿಗಿ ಹುಳುವಿನ ಕಾಟ ಹೆಚ್ಚಾಗಿ ಕಂಡು ಬಂದಾಗ ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರ, ಕೊಪ್ಪಳದಿಂದ ರೈತರ ತೋಟಗಳಿಗೆ ಭೇಟಿ ನೀಡಿ ಸಲಹೆ ನೀಡಲಾಗಿದ್ದು, ಕೆಲವರ ತೋಟದಲ್ಲಿ ಉತ್ತಮ ಫಸಲು ಕಂಡು ಬಂದಿದೆ.


ಹಣ್ಣಿನ ಆಕಾರ, ಗಾತ್ರ ಮತ್ತು ಬಣ್ಣ ಆಧರಿಸಿ ಹಣ್ಣುಗಳು ಕಟಾವಿಗೆ ಬಂದಿದೆ ಎಂದು ತಿಳಿಯಬಹುದು. ಹಣ್ಣುಗಳ ಭುಜಗಳು ಎತ್ತರವಾಗಿ ಕಿತ್ತಳೆ ಬಣ್ಣಕ್ಕೆ ತಿರುಗುತ್ತವೆ. ಸಾಮಾನ್ಯವಾಗಿ ತಳಿಯನ್ನಾಧರಿಸಿ ಕಾಯಿ ಕಚ್ಚಿದ ನಂತರ 15-16 ವಾರಗಳಲ್ಲಿ ಹಣ್ಣುಗಳು ಕಟಾವಿಗೆ ಬರುತ್ತವೆ. ಈ ಸಮಯದಲ್ಲಿ 6-8 ಕಾಯಿಗಳು ಉದುರಿ ಬೀಳುತ್ತವೆ. ಇವೆಲ್ಲವುಗಳನ್ನು ಗಮನಿಸಿ ಸೂಕ್ತ ಸಮಯದಲ್ಲಿ ಕೊಯ್ಲು ಮಾಡಬೇಕು.

**ಮಾವಿನಲ್ಲಿ ಕೊಯ್ಲು ಮಾಡುವ ವಿಧಾನ:**

ಉತ್ತಮಗಾತ್ರದ ಹಣ್ಣುಗಳನ್ನು ತಂಪಾದ ಹೊತ್ತಿನಲ್ಲಿ(ಬೆಳಿಗ್ಗೆ ಅಥವಾ ಸಾಯಂಕಾಲ) ಕಟಾವು ಮಾಡಬೇಕು. ಹಣ್ಣು ಕಟಾವು ಮಾಡುವಾಗ ಒಂದು ಇಂಚಿಗೂ ಹೆಚ್ಚು ಉದ್ದನೆಯ ದೇಟು ಇರುವಂತೆ ಕಟಾವು ಮಾಡಬೇಕು. ಕಟಾವು ಮಾಡಲು ಜೋಳಿಗೆ ಆಕಾರದ ಕೊಯ್ತ ಎನ್ನುವ ಸಾಧನವನ್ನು ಉಪಯೋಗಿಸಿ ಹಣ್ಣು ಕಟಾವು ಮಾಡಿದರೆ ಹಣ್ಣುಗಳು ಕೆಳಗೆ ಬಿದ್ದು ಹಾಳಾಗುವುದಿಲ್ಲ. ಕಟಾವಿನ ನಂತರ ಹಣ್ಣುಗಳನ್ನು ತಲೆ ಕೆಳಗಾಗಿ 4-6 ಗಂಟೆಗಳ ಕಾಲ ನೆರಳಿನಲ್ಲಿ ಶೇಖರಿಸಿಡಬೇಕು. ಇದರಿಂದಾಗಿ ಸೋನೆ (ಅಂಟುದ್ರವ) ಸೋರಿ ಹೋಗಿ ಹಣ್ಣುಗಳು ಕೆಡುವುದಿಲ್ಲ. ನಂತರ ಹಣ್ಣುಗಳನ್ನು ಶೇ.0.1 ರ ಟಿ.ಬಿ.ಝುಡ್ ಅಥವಾ ಬಾವಿಷ್ಟಿನ್ ದ್ರಾವಣದಲ್ಲಿ 2-3 ನಿಮಿಷಗಳ ಕಾಲ ಮುಳುಗಿಸಿ ನಂತರ ಹೊರತೆಗೆದು ಸ್ವಚ್ಚವಾದ ಬಟ್ಟೆಯಿಂದ ಒರೆಸಿ ಗಾತ್ರಕ್ಕೆ ತಕ್ಕಂತೆ ವಿಂಗಡಿಸಿ ಶೇಖರಿಸಿಡಬೇಕು.

**ಹಣ್ಣು ಮಾಗಿಸುವ ವಿಧಾನ:**

ಸುಮಾರು 1 ಟನ್ ನಷ್ಟು ಹಣ್ಣುಗಳನ್ನು ಟ್ರೇನಲ್ಲಿ ಹಾಕಿ ಹಣ್ಣು ಮಾಗಿಸುವ ಟೆಂಟ್‌ಗಳಲ್ಲಿ ಗಾಳಿ ಆಡದಂತೆ ಇಟ್ಟು ನಂತರ ಇಥ್ರೇಲ್ ಎನ್ನುವ



ದ್ರಾವಣದ ಸಹಾಯದಿಂದ ಹಣ್ಣುಗಳನ್ನು ಮಾಗಿಸಬಹುದಾಗಿದೆ. ಇಥ್ರೇಲ್ ಎನ್ನುವ ದ್ರಾವಣಕ್ಕೆ(2 ಮಿ.ಲೀ/ 1 ಘ.ಮೀ ಕೋಣೆ ಅಳತೆಗೆ ತಕ್ಕಂತೆ) 0.5 ಗ್ರಾಂ ಕಾಸ್ಟಿಕ್ ಸೋಡ ಬೆರೆಸಿ ಒಂದು ಬೀಕರನಲ್ಲಿ ಹಾಕಿ ಟೆಂಟ್‌ನೊಳಗಡೆ ಇಡಬೇಕು. ಈ ರೀತಿ ಉಪಚಾರದ 24 ಗಂಟೆಗಳ ನಂತರ ಟ್ರೇಗಳನ್ನು ಹೊರಗಡೆ ತೆಗೆದಿಡಬೇಕು. ಈ ರೀತಿ ಉಪಚರಿಸಿದ ಹಣ್ಣುಗಳು 4-5 ದಿನಗಳಲ್ಲಿ ಏಕರೂಪವಾಗಿ ಪಕ್ವಗೊಳ್ಳುತ್ತವೆ. ಇಂತಹ ಹಣ್ಣುಗಳು ಮಾರುಕಟ್ಟೆಗೆ ಸಾಗಿಸಲು ಯೋಗ್ಯವಾಗಿರುತ್ತವೆ.

ಇಂತಹ ಹಣ್ಣುಗಳನ್ನು ಎ, ಬಿ, ಸಿ ಎಂದು ವರ್ಗೀಕರಿಸಿ 45*26*17 ಸೆಂ.ಮೀ. ಅಥವಾ 32*27*10 ಸೆಂ.ಮೀ. ಗಾತ್ರದ ಪೆಟ್ಟಿಗೆಗಳಲ್ಲಿ ಮೆತ್ತನೆಯ ಹಾಸು (ಪೇಪರ ತುಂಡುಗಳು ಅಥವಾ ಕಟ್ಟಿಗೆ ಹೊಟ್ಟು) ಹಾಕಿ ದೂರದ ಊರುಗಳಿಗೆ ಸಾಗಿಸಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರದ ವಿಸ್ತರಣಾ ಮುಂದಾಳು ಡಾ.ಎಂ.ವಿ.ರವಿ, ಮೊ.ನಂ. 9480247745 ಮತ್ತು ಸಹಾಯಕ ಪ್ರಾಧ್ಯಾಪಕರಾದ ವಾಮನಮೂರ್ತಿ, ಮೊ.ನಂ. 9482672039 ಇವರನ್ನು ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

# ಸಮಾಜ ಸೇವಕ ಅರ್ಜುನ ಜಮಾದಾರ ಅವರಿಗೆ ಸನ್ಮಾನ



**ತಿಕೋಟಾ :** 18–ಏಪ್ರಿಲ್ 2024 ಕಲಬುರಗಿಯ ಜಿಲ್ಲೆಯ ಶರಣರತ್ನ ಪ್ರಶಸ್ತಿ ಪಡೆದುಕೊಂಡ ಅರ್ಜುನ ಜಮದಾರ ಇವರಿಗೆ ಇಂದು ಸಮಾಜದ ಕುಲಬಾಂಧವರು ಶಾಲು ಹೊದಸಿ ಹಾರ ಹಾಕಿ ಆತ್ಮೀಯವಾದ ಸನ್ಮಾನ ಮಾಡಲಾಯಿತು. ಅರ್ಜುನ ಜಮಾದಾರ ಇವರು ಕನ್ನಡ ನಾಡು, ನುಡಿ, ನೆಲ, ಜಲದ ರಕ್ಷಣೆಗಾಗಿ ತಮ್ಮನ್ನು ತಾವು ತೊಡಗಿಸಿಕೊಂಡು ಸಮಾಜ ಸೇವೆಯಲ್ಲಿ ಸಲ್ಲಿಸಿರುವ ಅಮೂಲ್ಯ ಸೇವೆಯನ್ನು ಪರಿಗಣಿಸಿ ಇವರಿಗೆ ಕಲಬುರ್ಗಿ ಜಿಲ್ಲೆಯ ಪ್ರತಿಷ್ಠಿತ ಸಂಸ್ಥೆಯಾದ ಶ್ರೀ ಶರಣಬಸವೇಶ್ವರ ಸಂಸ್ಥೆಯ ಕಡೆಯಿಂದ ಈ ಸಾಲಿನ ಶರಣ ರತ್ನ ಪ್ರಶಸ್ತಿಯನ್ನು ಸಮಾಜ ಸೇವಕ ಅರ್ಜುನ ಜಮಾದಾರ ಅವರಿಗೆ ನೀಡಲಾಗಿದ್ದು, ಮಾಣಿಕೇಶ್ವರಿ ಕಾಲೋನಿಯ ಕೋಕಿಲಾ ಪರಮೇಶ್ವರಿ ದೇವಾಲಯದಲ್ಲಿ ಇಂದು ಜಗನ್ನಾಥ ಈರುಳ್ಳಿ, ಸಾಯಬಣ್ಣ ವಡಗೇರಿ, ಮಲ್ಲಿಕಾರ್ಜುನ ಜೊಕೆ, ರಾಜೇಂದ್ರ ಜಳಕಿ, ಪ್ರಕಾಶ ತಲಾರಿ, ಚಂದ್ರಶೇಖರ ಸರ್, ದೇವೆಂದ್ರಪ್ಪ ಆನೆಗುಂದಿ, ಬಸವರಾಜ ಸುರಪೂರ, ರಾಜು ಸೊನ್ನ, ಡಾ.ಹಣಮಂತ್ರಾಯ ಸೇರಿದಂತೆ ಅನೇಕರು ಅರ್ಜುನ ಜಮದಾರ ಇವರಿಗೆ ಆತ್ಮಿಯವಾದ ಸನ್ಮಾನ ಮಾಡಿ ಅವರಿಗೆ ಶುಭಾಶಯಗಳನ್ನು ತಿಳಿಸಿದರು.

# ಮತದಾನದಲ್ಲಿ ಪ್ರತಿಯೊಬ್ಬರು ಕಡ್ಡಾಯವಾಗಿ ಪಾಲ್ಗೊಳ್ಳಿ

**ರಬಕವಿ–ಬನಹಟ್ಟಿ :** ಸಂವಿಧಾನ ಭಾರತೀಯ ಪ್ರಜೆಗಳಿಗೆ ಮತದಾನದ ಹಕ್ಕನ್ನು ನೀಡಿದೆ. ಪ್ರತಿಯೊಂದು ಸರ್ವಜನಿಕ ಚುನಾವಣೆಯಲ್ಲಿ ಪ್ರತಿಯೊಬ್ಬರು ಮತದಾನದಲ್ಲಿ ಪಾಲ್ಗೊಳ್ಳಬೇಕು. ಮತದಾನದ ಪವಿತ್ರವಾದ ಕರ್ತವ್ಯವಾಗಿದೆ. 18 ವರ್ಷ ಮೇಲ್ಪಟ್ಟ ಪ್ರತಿಯೊಬ್ಬರು ಮತದಾನದಲ್ಲಿ ಭಾಗವಹಿಸಬೇಕು ಎಂದು ರಬಕವಿ ಬನಹಟ್ಟಿ ನಗರಸಭೆಯ ಪೌರಾಯುಕ್ತ ಜಗದೀಶ ಈಟಿ ತಿಳಿಸಿದರು.

ರಬಕವಿಯಲ್ಲಿ ಮತದಾನ ಜಾಗೃತಿ ಅಭಿಯಾನ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.



ಮತದಾನದ ದಿನದಂದು ಯಾವುದೆ ಆಸೆ ಆಮೀಷಗಳಿಗೆ ಒಳಗಾಗದೆ ಯೋಗ್ಯವಾದ ಅಭ್ಯರ್ಥಿಗೆ ಮತ ನೀಡುವುದರ ಮೂಲಕ ನಾವು ನಮ್ಮ ಹಕ್ಕನ್ನು ಚಲಾಯಿಸಬೇಕು. ಮತದಾನದ ಜಾಗೃತಿಯಲ್ಲಿ ಯುವಕರ ಪಾತ್ರ ಬಹಳಷ್ಟು ಮುಖ್ಯವಾಗಿದೆ. ಯುವಕರು ತಾವು ಮತ ಚಲಾಯಿಸುವದರ ಜೊತೆಗೆ ತಮ್ಮ ನೆರೆ ಹೊರೆಯವರಿಗೂ ಮತದಾನದಲ್ಲಿ ಭಾಗವಹಿಸುವಂತೆ ತಿಳಿಸಬೇಕು ಎಂದು ಈಟಿ ತಿಳಿಸಿದರು.

ತಾ.ಪಂ. ಕಾರ್ಯನಿರ್ವಾಹಣಾಧಿಕಾರಿ ಶ್ಯಾಮಸುಂದರ ಕಾಂಬಳೆ, ಸಿಡಿಪಿಓ ಮಲ್ಲಪ್ಪ ದಾಸರ, ವಸಂತ ಪವಾರ, ಎಸ್. ಬಿ. ಮಠದ, ಮುತ್ತಪ್ಪ ಚೌಡಕಿ, ಭೀಮು ಬಾಡಗಿ, ಆಶಾ ಕಾರ್ಯಕರ್ತೆಯರು ಸೇರಿದಂತೆ ಅನೇಕರು ಇದ್ದರು.

# ಬೈಲಹೊಂಗಲ ಕ್ಷೇತ್ರದಲ್ಲಿ ಕಾಂಗ್ರೆಸ್‌ಗೆ ಅತ್ಯಧಿಕ ಮುನ್ನಡೆ ಖಚಿತ: ಶಾಸಕ ಮಹಾಂತೇಶ್ ಕೌಜಲಗಿ ಕಾಂಗ್ರೆಸ್ ಅಭ್ಯರ್ಥಿ ಮೃಣಾಲಹೆಬ್ಬಾಳಕರ್ ಪರ ಅಬ್ಬರದ ಪ್ರಚಾರ

**ಬೈಲಹೊಂಗಲ :** ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಮೃಣಾಲ್ ಹೆಬ್ಬಾಳ್ಕರ್ ಅವರಿಗೆ ಮತ ಹಾಕಿದರೆ ನನಗೆ ಮತ ಹಾಕಿದಂತೆ, ಬೈಲಹೊಂಗಲ ವಿಧಾನಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಮುನ್ನಡೆ ಖಚಿತ ಎಂದು ಶಾಸಕ ಮಹಾಂತೇಶ್ ಕೌಜಲಗಿ ವಿಶ್ವಾಸ ವ್ಯಕ್ತಪಡಿಸಿದರು.

ಬೈಲಹೊಂಗಲ ವಿಧಾನಸಭಾ ವ್ಯಾಪ್ತಿಯ ಯಕ್ಕುಂಡಿ, ಬಡ್ಲಿ ಹಾಗೂ ಬೈಲಹೊಂಗಲ ಪಟ್ಟಣದಲ್ಲಿ ಚುನಾವಣಾ ಪ್ರಚಾರದಲ್ಲಿ ಮಾತನಾಡಿದ ಶಾಸಕರು, ಈ ಬಾರಿ ಬೆಳಗಾವಿ ಲೋಕಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್ ಗೆಲುವು ಶತಸಿದ್ಧ ಎಂದರು.

ಕಳೆದ 10 ತಿಂಗಳಿಂದ ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಆಡಳಿತ ನಡೆಸುತ್ತಿದ್ದು, ಬಡವರ, ದೀನ ದಲಿತರ ಹಾಗೂ ಮಹಿಳಾ ಸಬಲೀಕರಣಕ್ಕೆ ಹೆಚ್ಚಿನ ಒತ್ತು ನೀಡುತ್ತಿದೆ. ಪಂಚ ಗ್ಯಾರಂಟಿ ಯೋಜನೆಗಳು ಮನೆ ಮನೆಗೆ ತಲುಪುತ್ತಿವೆ. ಮೃಣಾಲ್ ಹೆಬ್ಬಾಳ್ಕರ್ ಅವರನ್ನು ಗೆಲ್ಲಿಸುವ ಮೂಲಕ ಕಾಂಗ್ರೆಸ್ ಸರ್ಕಾರವನ್ನು ಮತ್ತಷ್ಟು ಬಲಪಡಿಸಬೇಕು ಎಂದು ಶಾಸಕರು ಕರೆ ನೀಡಿದರು.



**ಶೆಟ್ಟರ್ ಹುಬ್ಬಳ್ಳಿಗೆ, ಮೃಣಾಲ್ ದೆಹಲಿಗೆ :** ಇದೇ ವೇಳೆ ಮಾತನಾಡಿದ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಅವರು, ಅತ್ಯಧಿಕ ಮತಗಳಿಂದ ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಮೃಣಾಲ್ ಹೆಬ್ಬಾಳ್ಕರ್ ಅವರನ್ನು ಗೆಲ್ಲಿಸಿ ದೆಹಲಿಗೆ ಕಳುಹಿಸೋಣ, ಬಿಜೆಪಿ ಅಭ್ಯರ್ಥಿ ಜಗದೀಶ್ ಶೆಟ್ಟರ್ ಅವರನ್ನು ಸೋಲಿಸಿ ಮನೆಗೆ ಕಳುಹಿಸೋಣ ಎಂದು ಕರೆ ನೀಡಿದರು. ಮೃಣಾಲ್ ಹೆಬ್ಬಾಳ್ಕರ್ ಗೆದ್ದರೆ, ನನ್ನ, ಜಿಲ್ಲಾ ಉಸ್ತುವಾರಿ ಸಚಿವ ಸತೀಶ್ ಜಾರಕಿಹೊಳಿ ಹಾಗೂ ಜಿಲ್ಲೆಯ ಎಲ್ಲ ಶಾಸಕರ ಮಾರ್ಗದರ್ಶನದಲ್ಲಿ ಕೆಲಸ ಮಾಡಲಿದ್ದಾನೆ. ಕ್ಷೇತ್ರವನ್ನ ಮಾದರಿ ಕ್ಷೇತ್ರವನ್ನಾಗಿ ಮಾಡುವ ಕನಸು ಹೊಂದಿದ್ದಾನೆ ಎಂದು ಹೇಳಿದರು.

ಭ್ರಷ್ಟ ಬಿಜೆಪಿ ಸರ್ಕಾರ, ಕೋವಿಡ್ ವೇಳೆ ಜನರ ರಕ್ತ ಹೀರಿತ್ತು. ಇದಕ್ಕೆ ಕಳೆದ ವಿಧಾನಸಭಾ ಚುನಾವಣೆಯಲ್ಲಿ ಕರ್ನಾಟಕದ ಮಹಾಜನತೆ ಬಿಜೆಪಿಗೆ ತಕ್ಕ ಉತ್ತರ ನೀಡಿದ್ದರು. ಈ ಚುನಾವಣೆಯಲ್ಲೂ ಕಾಂಗ್ರೆಸ್ ಬೆಂಬಲಿಸಬೇಕು ಎಂದು ಹೇಳಿದರು. ಕಳೆದ ಅವಧಿಯಲ್ಲಿ 40 ಪರ್ಸೆಂಟ್ ತಿಂದು ಮನೆಯಲ್ಲಿ ಕುಳಿತಿರುವ ಬಿಜೆಪಿಗರು ಸುಖಾಸುಮ್ಮನೆ ಗ್ಯಾರಂಟಿ ಯೋಜನೆಗಳ ಬಗ್ಗೆ ಅಪಪ್ರಚಾರ ಮಾಡುತ್ತಿದ್ದಾರೆ ಎಂದು ಆರೋಪಿಸಿದರು. ಬಿಜೆಪಿ ಅವಧಿಯ ಭ್ರಷ್ಟಾಚಾರಕ್ಕೆ ನಲುಗಿ ಸಂತೋಷ ಪಾಟೀಲ್ ಎಂಬ ಗುತ್ತಿಗೆದಾರ ಆತ್ಮಹತ್ಯೆ ಮಾಡಿಕೊಂಡಿದ್ದರು. ಅವರ ಭ್ರಷ್ಟಾಚಾರಕ್ಕೆ ಇದಕ್ಕಿಂತ ಇನ್ನೊಂದು ಉದಾಹರಣೆ ಬೇಕೆ? ಎಂದು ಪ್ರಶ್ನಿಸಿದರು.

ಕಾಂಗ್ರೆಸ್ ಸರ್ಕಾರದಿಂದ ಜನರಿಗೆ ಐದು ಗ್ಯಾರಂಟಿ ಯೋಜನೆಗಳ ಲಾಭ ಆಗುತ್ತಿದೆ. ಇದನ್ನು ಸಹಿಸದ ಬಿಜೆಪಿಯವರು ಲೋಕಸಭೆ ಆದ್ಮೇಲೆ ಗ್ಯಾರಂಟಿ ಯೋಜನೆಗಳು ಬಂದ್ ಆಗಲಿವೆ ಎಂದು ಅಪಪ್ರಚಾರ ಮಾಡುತ್ತಿದ್ದಾರೆ ಎಂದು ಆರೋಪಿಸಿದರು. ಬಿಜೆಪಿಯವರು ಮೋದಿ ನೋಡಿ ವೋಟ್ ಹಾಕಿ, ಶೆಟ್ಟರ್ ನೋಡ್ಬೇಡಿ ಅಂತ ಹೇಳ್ತಿದ್ದಾರೆ ಎಂದು ಸಚಿವರು ಟೀಕಿಸಿದರು. ಕಾಂಗ್ರೆಸ್ ಪಕ್ಷ ಎಂದರೆ ಬದ್ಧತೆ ಹೊಂದಿರುವ ಪಕ್ಷ, ಶೆಟ್ಟರ್ ಅವರನ್ನು ವಾಪಸ್ ಹುಬ್ಬಳ್ಳಿಗೆ, ಮೃಣಾಲ್ ದೆಹಲಿಗೆ ಕಳುಹಿಸೋಣ ಎಂದು ಕರೆ ನೀಡಿದರು.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಶಂಕರಗೌಡ ಪಾಟೀಲ, ಜಿಲ್ಲಾ ಯುವ ಕಾಂಗ್ರೆಸ್ ಅಧ್ಯಕ್ಷರಾದ ಕಾರ್ತಿಕ್ ಪಾಟೀಲ್, ಮಹಾಂತೇಶ ಮತ್ತಿಕೊಪ್ಪ, ಗ್ರಾಮ ಪಂಚಾಯತ್ ಅಧ್ಯಕ್ಷ ಚಿದಂಬರ ಆಡಿನ್, ಯಲ್ಲನಗೌಡ ಪಾಟೀಲ, ಅನಿಲ ಮೇಕಲಮರ್ಡಿ, ಕರೆಪ್ಪ ಸವದತ್ತಿ, ಕೃಷ್ಣ ಮಾಸ್ತರ, ರಮೇಶ ಚವ್ಹಾಣ ಮೊದಲಾದವರು ಉಪಸ್ಥಿತರಿದ್ದರು.

# ಮತದಾನ ಮಾಡುವದು ಪ್ರತಿಯೊಬ್ಬ ನಾಗರಿಕನ ಕರ್ತವ್ಯ: ಪಿ.ಡಿ.ನಾಗನೂರು

**ಮಹಾಲಿಂಗಪುರ :** ಸಮೀಪದ ರನ್ನಬೆಳಗಲಿಯ ಪಟ್ಟಣ ಪಂಚಾಯತ ಆಶ್ರಯದಲ್ಲಿ ಪಟ್ಟಣದ ವ್ಯಾಪ್ತಿಯಲ್ಲಿ ಬರುವ ವಿಶೇಷ ಚೇತನರಿಂದ ತ್ರಿಚಕ್ರ ವಾಹನಗಳ ಬೈಕ್ ರ‍್ಯಾಲಿ ಮೂಲಕ ಮತದಾನ ಜಾಗೃತಿ ಜಾಥಾ ಕಾರ್ಯಕ್ರಮ ಜರಗಿತು. ಜಾಥಾ ಉದ್ಘಾಟಿಸಿದ ಪಪಂ ಪ್ರಥಮ ದರ್ಜೆ ಸಹಾಯಕ ಪಿ.ಡಿ.ನಾಗನೂರು ಮಾತನಾಡಿ ಮತದಾನ ಮಾಡುವದು ಮತ್ತು ಮತದಾನ ಜಾಗೃತಿ ಮೂಡಿಸುವದು ಪ್ರತಿಯೊಬ್ಬ ನಾಗರಿಕನ ಕರ್ತವ್ಯವಾಗಿದೆ. ಭಾರತೀಯ ಸಂವಿಧಾನ ವಿಶ್ವ ಸಂವಿಧಾನವಾಗುತ್ತಿದೆ. ಸಂವಿಧಾನದ ಭದ್ರತೆಗೆ ಮತದಾನ ಬಹಳ ಮುಖ್ಯ. ಪಟ್ಟಣದಲ್ಲಿ ಪ್ರತಿಶತ ನೂರಕ್ಕೆ ನೂರಷ್ಟು ಮತದಾನ ಆಗಬೇಕೆಂಬ ಮಹದಾಸೆಯಿಂದ ಜಾಥಾ ಹಮ್ಮಿಕೊಳ್ಳಲಾಗಿದೆ. ಮೇ 7ರಂದು ಎಲ್ಲರೂ ಕಡ್ಡಾಯವಾಗಿ ಮತದಾನದಲ್ಲಿ ಭಾಗವಹಿಸಿ ಎಂದು ವಿನಂತಿಸಿದರು.



ಪಟ್ಟಣ ಪಂಚಾಯತ್ ವ್ಯಾಪ್ತಿಯಲ್ಲಿ ಬರುವ ವಿಶೇಷ ಚೇತನರಿಂದ ತ್ರಿಚಕ್ರ ವಾಹನಗಳ ಮೂಲಕ ಪ್ರಮುಖ ಬೀದಿಗಳಲ್ಲಿ ಮತದಾನ ಜಾಗೃತಿಯ ಮೆರವಣಿಗೆ ನಡೆಯಿತು. ಶಿವಾನಂದ ಚೌದ್ರಿ, ಸತ್ಯಪ್ಪ ಹನಗಂಡಿ, ರಾಮಪ್ಪ ಹುನ್ನೂರ, ಅಂಗವಿಕಲ ಸಂಘದ ಅಧ್ಯಕ್ಷರಾದ ರವಿ ಭಜಂತ್ರಿ ಹಾಗೂ ಸಂಘದ ಸದಸ್ಯರು ಸಾರ್ವಜನಿಕರು ಮತ್ತು ಯುವ ಮತದಾರರು ಭಾಗವಹಿಸಿದ್ದರು.

# ಹುನ್ನೂರ ಚೆಕ್‌ಪೋಸ್ಟ ತಂಡಕ್ಕೆ ಎಚ್ಚರಿಕೆ ನೋಟಿಸ್ ಚುನಾವಣಾ ಕರ್ತವ್ಯಲೋಪ : ಇಬ್ಬರು ಅಮಾನತ್ತು

**ಬಾಗಲಕೋಟೆ :** ಚುನಾವಣಾ ಕೆಲಸದಲ್ಲಿ ಬೇಜವಾಬ್ದಾರಿತನ ಹಾಗೂ ನಿರ್ಲಕ್ಷತನ ತೋರಿ ಕರ್ತವ್ಯದ ಸ್ಥಳದಲ್ಲಿ ಹಾಜರಿರದೇ ಕರ್ತವ್ಯಲೋಪ ಎಸಗಿರುವ ಇಬ್ಬರು ಅಧಿಕಾರಿಗಳನ್ನು ಸೇವೆಯಿಂದ ಅಮಾನತ್ತುಗೊಳಿಸಿ ಜಿಲ್ಲಾಧಿಕಾರಿಗಳು ಆಗಿರುವ ಜಿಲ್ಲಾ ಚುನಾವಣಾಧಿಕಾರಿ ಜಾನಕಿ ಕೆ.ಎಂ ಆದೇಶ ಹೊರಡಿಸಿದ್ದಾರೆ.

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ನಿಯಲ ಪಾಲಕ ಬಸವರಾಜ ಆಲಗೂರ ಮತ್ತು ಜಮಖಂಡಿ ಸಾಮಾಜಿಕ ಅರಣ್ಯ ಇಲಾಖೆಯ ಡೆಪ್ಯೂಟಿ ಆರ್‌ಎಫ್‌ಓ ಪ್ರಶಾಂತ ಇಟ್ಟಿ ಸೇವೆಯಿಂದ ಅಮಾನತ್ತುಗೊಂಡ ಅಧಿಕಾರಿಗಳು. ಸದರಿ ಅಧಿಕಾರಿಗಳನ್ನು ಹುನ್ನೂರ ಚೆಕ್‌ಪೋಸ್ಟನಲ್ಲಿ ಚುನಾವಣಾ ಕಾರ್ಯಕ್ಕೆ ನಿಯೋಜಿಸಲಾಗಿತ್ತು. ರಾತ್ರಿಯ ಪಾಳೆಯದಲ್ಲಿ ನಿದ್ರೆಗೆ ಜಾರಿ ಕರ್ತಲೋಪ ಎಸಗಿದ್ದು, ಜನತಾ ಪ್ರಾತಿನಿಧ್ಯ ಕಾಯ್ದೆ 1951ರ ಪ್ರಕಾರ ಸದರಿ ಅಧಿಕಾರಿಗಳನ್ನು ಸೇವೆಯಿಂದ ಅಮಾನತ್ತುಗೊಳಿಸಿ ಆದೇಶ ಹೊರಡಿಸಿದ್ದಾರೆ. ಸದರಿ ಅವಧಿಯಲ್ಲಿ ಕರ್ನಾಟಕ ನಾಗರಿಕ ಸೇವಾ ನಿಯಮ 98ರನ್ವಯ ಜೀವನಾಂಶ ಭತ್ತೆ ಪಡೆಯಲು ಅರ್ಹತೆ ಹೊಂದಿರುತ್ತಾರೆಂದು ಆದೇಶದಲ್ಲಿ ತಿಳಿಸಿದ್ದಾರೆ.

ಅಲ್ಲದೇ ಹುನ್ನೂರು ಚೆಕ್‌ಪೋಸ್ಟನಲ್ಲಿ ವಾಹನಗಳನ್ನು ತಪಾಸಣೆ ಮಾಡದೇ ಕರ್ತವ್ಯ ಸಮಯದಲ್ಲಿ ನಿದ್ರೆಗೆ ಜಾರಿರುವ ಎಸ್.ಎಸ್.ಟಿ ತಂಡಕ್ಕೆ ಎಚ್ಚರಿಕೆ ನೋಟಿಸ್‌ನ್ನು ಸಹ ಜಿಲ್ಲಾ ಚುನಾವಣಾಧಿಕಾರಿಗಳು ನೀಡಿದ್ದಾರೆ.

# ಸೇತುವೆ ಕಾಮಗಾರಿ: ಸಾರ್ವಜನಿಕರಿಂದ ಅಧಿಕಾರಿಗಳ ತರಾಟೆ

**ರಬಕವಿ–ಬನಹಟ್ಟಿ :** ತಾಲೂಕಿನ ಮಹತ್ತರ ಯೋಜನೆಯಾಗಿರುವ ರಬಕವಿ – ಬನಹಟ್ಟಿ – ಅಥಣಿಯ ಮಹಿಷವಾಡಗಿ ಸೇತುವೆ ನಿರ್ಮಾಣ ಕಾಮಗಾರಿ ಆಮೆಗತಿಯಲ್ಲಿ ನಡೆಯುತ್ತಿರುವಾಗ ದಿಢೀರ್ ಆಗಮಿಸಿ ಕೆಆರ್ಡಿಸಿಎಲ್ನ ಯೋಜನಾಧಿಕಾರಿ ವಸಂತ ನಾಯಕ ವೀಕ್ಷಣೆ ನಡೆಸುತ್ತಿರುವ ಸಂದರ್ಭ ಸಾರ್ವಜನಿಕರು ಕಾಮಗಾರಿ ವಿಳಂಬ ನೀತಿಗೆ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡ ಪ್ರಸಂಗ ನಡೆಯಿತು.

8 ವರ್ಷಗಳಿಂದ ನಡೆಯುತ್ತಿರುವ ಕೇವಲ 50 ಕೋಟಿ ರೂ. ಗಳ ಕಾಮಗಾರಿಯನ್ನು ಒಂದು ವರ್ಷದಲ್ಲಿ ಮುಕ್ತಾಯಗೊಳಿಸಬೇಕಿತ್ತು. ಸರ್ಕಾರದ ನಿರ್ಲಕ್ಷ ?ಯ ಹಾಗು ಗುತ್ತಿಗೆದಾರನ ಬೇಜವಾಬ್ದಾರಿಯಿಂದಾಗಿ ಕಾಮಗಾರಿ ಹಳ್ಳ ಹಿಡಿಯುವಲ್ಲಿ ಕಾರಣವಾಗಿದೆ.



ನದಿ ನೀರಿನಲ್ಲಿ ಉನ್ನತ ಕಾಮಗಾರಿ ಕೈಗೆತ್ತಿಕೊಳ್ಳುವ ಬದಲು ಮಾನವ ಸಂಪನ್ಮೂಲ ಬಳಕೆಯಿಂದ ತೀರಾ ಕಡಿಮೆ ಮಟ್ಟದ ಯೋಜನೆ ರೂಪಿಸಿರುವದೇ ಕಾಮಗಾರಿ ವಿಳಂಬ ಕಾರಣವಾಗಿದೆ.

ಬೇಸಿಗೆ ಸಂದರ್ಭದಲ್ಲಿ ಇಡೀ ನದಿಯೊಳಗಿನ ಕಾಮಗಾರಿ ಮುಕ್ತಾಯ ಕಾಣಬೇಕಿತ್ತು. ಇಂತಹ ಆರೇಳು ಬೇಸಿಗೆಗಳು ಮುಗಿದು, ನದಿಯೊಳಗೆ ಒಂದು ಹನಿಯೂ ನೀರಿಲ್ಲದ ಸಂದರ್ಭದಲ್ಲಿಯೂ ಕಾಮಗಾರಿ ನಡೆಸದೆ ನಿರ್ಲಕ್ಷ ಯವನ್ನು ಜನತೆ ಆಕ್ರೋಶಗೊಂಡು ಈ ಬೇಸಿಗೆಯಲ್ಲಾದರೂ ನದಿಯೊಳಗಿನ ಕಾಮಗಾರಿ ಮುಕ್ತಾಯಗೊಳಿಸಿ ರಸ್ತೆ ಸಂಚಾರಕ್ಕೆ ಅವಕಾಶ ಕಲ್ಪಿಸಬೇಕೆಂದು ಒತ್ತಾಯಿಸಿದರು.

ನಂತರ ಕೆಆರ್ಡಿಸಿಎಲ್ ಯೋಜನಾಧಿಕಾರಿ ವಸಂತ ನಾಯಕ ಮಾತನಾಡಿ, ಇದೇ ವಾರದಿಂದ ಕಾಮಗಾರಿಗೆ ವೇಗ ಹೆಚ್ಚಿಸುವದಾಗಿ ಭರವಸೆ ನೀಡಿದರಲ್ಲದೆ, ವಿಳಂಬನೀತಿ ಅನುಸರಿಸಿದರೆ ಗುತ್ತಿಗೆದಾರರನ್ನು ಬದಲಿಸಿ ಹೊಸ ಗುತ್ತಿಗೆದಾರರನಿಗೆ ಕಾಮಗಾರಿ ನೀಡಲಾಗುವದೆಂದು ವಿಶ್ವಾಸ ನೀಡಿದರು.

ಡಾ. ರವಿ ಜಮಖಂಡಿ, ಗಣಪತರಾವ್ ಹಜಾರೆ, ರಾಮಣ್ಣ ಹುಲಕುಂದ ನಂದು ತೇಲಿ, ರವಿ ಗಡಾದ, ಆನಂದ ಜುಗಳಿ ಸೇರಿದಂತೆ ಅನೇಕರಿದ್ದರು.

# ಎನ್‌ಎಸ್‌ಎಸ್ ಶಿಬಿರಾರ್ಥಿಗಳಿಗೆ ಮತದಾನ ಮಹತ್ವದ ಕುರಿತು ಅರಿವು



ವಿಜಯಪುರ : ವಿಜಯಪುರದ ದಿ ಪ್ರೆಸಿಡೆನ್ಸಿ ಶಿಕ್ಷಣ ಮಹಾವಿದ್ಯಾಲಯ ಹಿಟ್ಟನಹಳ್ಳಿ ಗ್ರಾಮದ ಮಾರುತೇಶ್ವರ ದೇವಾಲಯದಲ್ಲಿ ಆಯೋಜಿಸಿದ ಎನ್. ಎಸ್. ಎಸ್. ವಾರ್ಷಿಕ ವಿಶೇಷ ಶಿಬಿರ ಶಿಬಿರಾರ್ಥಿಗಳಿಗೆ ಮತದಾನದ ಮಹತ್ವದ ಕುರಿತು ಮಾಹಿತಿಯನ್ನು ನೀಡಲಾಯಿತು.

ನಂತರ 100 ಕ್ಕಿಂತ ಹೆಚ್ಚು ಶಿಬಿರಾರ್ಥಿಗಳು ನಾಗಠಾಣ ವಿಧಾನಸಭಾ ಮತಕ್ಷೇತ್ರದ ಹಿಟ್ಟಿನಹಳ್ಳಿ ಗ್ರಾಮದಲ್ಲಿ ಮತದಾನಜಾಗೃತಿಜಾಥಾವನ್ನುಏರ್ಪಡಿಸಲಾಯಿತು. ಜೊತೆಗೆ ಪಂಚಾಯತಿ ಮತಗಟ್ಟೆ ಸಂಖ್ಯೆ 284 ರಲ್ಲಿ ಸ್ವಚ್ಛತಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು, ನಂತರ ಎಲ್ಲ ವಿದ್ಯಾರ್ಥಿನಿಯರಿಂದ ಮತದಾನ ಜಾಗೃತಿ ಕುರಿತು ರಂಗೋಲಿ ಸ್ಪರ್ಧೆಯನ್ನು ಏರ್ಪಡಿಸಲಾಯಿತು

ರಾಷ್ಟ್ರೀಯ ಸೇವಾ ಯೋಜನೆಯ ಜಿಲ್ಲಾ ಸಂಂ–ಯೋಜನಾಧಿಕಾರಿ ಡಾ. ಪ್ರಕಾಶ ರಾಠೋಡ ಹಾಗೂ ಜಿಲ್ಲಾ ಚುನಾವಣಾ ರಾಯಭಾರಿ ರಾಜು ಪವಾರ ಅವರು ಜಾಥಾಗೆ ಚಾಲನೆಯನ್ನು ನೀಡಿದರು. ಗ್ರಾಮ ಪಂಚಾಯತಿ ಕಾರ್ಯದರ್ಶಿ ಡಿ.ಎಸ್ ತಳವಾರ, ಸಮುದಾಯ ಆರೋಗ್ಯ ಅಧಿಕಾರಿ ಸಂತೋಷ ನಡುವಿನಮನಿ, ಆಶಾ ಕಾರ್ಯಕರ್ತೆಯರು, ಅಂಗನವಾಡಿ ಕಾರ್ಯಕರ್ತೆಯರು ಮತ್ತು ಗ್ರಾಮ ಪಂಚಾಯತಿ ಸಿಬ್ಬಂದಿ ವರ್ಗದವರು ಉಪಸ್ಥಿತ–ರಿದ್ದರು.

ಪ್ರಾಚಾರ್ಯ ಡಾ.ಎಸ್ ಟಿ ಬೋಳರೆಡ್ಡಿ ಅವರು ಘೋಷಣೆಯನ್ನು ಮಾಡುವುದರ ಮೂಲಕ ಗ್ರಾಮದ ಜನರಲ್ಲಿ ಮತದಾನ ಜಾಗೃತಿಯನ್ನು ಮೂಡಿಸಿದರು. ಎನ್‌ಎಸ್‌ಎಸ್ ಕಾರ್ಯಕ್ರಮ ಅಧಿಕಾರಿ ಪಿ.ಆರ್. ಡೋಣೂರ ಅವರು ಹಾಗೂ ಎನ್‌ಎಸ್‌ಎಸ್ ಕಾರ್ಯದರ್ಶಿ ಖಾಜಾಅಮೀನ ವಾಲಿಕಾರ ಅವರು ಪಾಲ್ಗೊಂಡಿದ್ದರು. ಹಿಟ್ಟಿನಹಳ್ಳಿ ಗ್ರಾಮ ಪಂಚಾಯತಿ ವತಿಯಿಂದಮತದಾನಜಾಗೃತಿಯವಿಷಯದಕುರಿತು ರಂಗೋಲಿ ಸ್ಪರ್ಧೆಯನ್ನು ಏರ್ಪಡಿಸಿ ಅದರಲ್ಲಿ ಪ್ರಥ–ಮ ದ್ವಿತೀಯ ಹಾಗೂ ತೃತೀಯ ಬಹುಮಾನವನ್ನು ನೀಡುವುದರ ಮೂಲಕ ಎಲ್ಲರಲ್ಲಿಯೂ ಮತದಾನದ ಜಾಗೃತಿಯನ್ನು ಮೂಡಿಸಿದರು. ಈ ರಂಗೋಲಿ ಸ್ಪರ್ಧೆಯಲ್ಲಿ ಶಿಬಿರಾರ್ಥಿಗಳೊಂದಿಗೆ ಗ್ರಾಮಸ್ಥರು ಸಹ ಭಾಗವಹಿಸಿದ್ದರು.

# ಸಂವಿಧಾನ ಶಿಲ್ಪಿ ಬಾಬಾಸಾಹೇಬ್ ಡಾ. ಬಿ.ಆರ್. ಅಂಬೇಡ್ಕರ್ ಜನ್ಮದಿನ ಆಚರಣೆ



**ಧಾರವಾಡ :** ಕರ್ನಾಟಕ ವಿಶ್ವವಿದ್ಯಾಲಯದ ಕರ್ನಾಟಕ ಕಾಲೇಜಿನ ಗೋದಾವರಿ ವಿದ್ಯಾರ್ಥಿ ವಸತಿ ನಿಲಯದಲ್ಲಿ ಸಂವಿಧಾನ ಶಿಲ್ಪಿ ಬಾಬಾಸಾಹೇಬ್ ಡಾ. ಬಿ.ಆರ್. ಅಂಬೇಡ್ಕರ್ ಅವರ 133ನೇ ಜನ್ಮದಿನಾಚರಣೆ ಆಚರಿಸಲಾಯಿತು.

ಗೋದಾವರಿ ವಿದ್ಯಾರ್ಥಿ ವಸತಿ ನಿಲಯದ ಕ್ಷೇಮಪಾಲಕರಾದ ಡಾ. ಎಸ್.ಕೆ. ರಾಜಪ್ಪ ಅವರು ಮಾಲಾರ್ಪಣೆ ಮಾಡುವುದರ ಮೂಲಕ ಸಂವಿಧಾನ ಶಿಲ್ಪಿ ಬಾಬಾಸಾಹೇಬ್ ಡಾ. ಬಿ.ಆರ್. ಅಂಬೇಡ್ಕರ್ ಅವರ 133ನೇ ಜನ್ಮದಿನಾಚರಣೆ ಆಚರಿಸಲಾಯಿತು. ವಿದ್ಯಾರ್ಥಿಗಳಿಗೆ ಡಾ. ಬಿ.ಆರ್. ಅಂಬೇಡ್ಕರ್ ಅವರ ವಿಚಾರಧಾರೆಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಲು ಕರೆ ನೀಡಿದರು.

ಈ ಕಾರ್ಯಕ್ರಮದಲ್ಲಿ ಸಿಬ್ಬಂದಿಗಳಾದ ಶಿವರಾಜ ಕಾಂಬಳೆ, ಬಸವರಾಜ ಸತ್ತಿಗೇರಿ ಹಾಗೂ ಸಮಸ್ತ ವಿದ್ಯಾರ್ಥಿಗಳು ಹಾಜರಿದ್ದರು. ಕಾರ್ಯಕ್ರಮವನ್ನು ಉಮೇಶ ನಿರೂಪಿಸಿದರು, ಶಿವರಾಜ ಕಾಂಬಳೆ ವಂದಿಸಿದರು. ನಂತರ ವಿದ್ಯಾರ್ಥಿಗಳಿಗೆ ಸಿಹಿ ಹಂಚಲಾಯಿತು.

# ಬಸ್ ನಿಲುಗಡೆಗೆ ಮನವಿ

**ರಬಕವಿ–ಬನಹಟ್ಟಿ :** ರಬಕವಿಯ ಭಗೀರಥ ವೃತ್ತದಲ್ಲಿ ಸಾರಿಗೆ ಬಸ್ಗಳನ್ನು ವಿನಂತಿ ಮೆರೆಗೆ ಬಸ್ ನಿಲುಗಡೆಗೆ ನಾಗರಿಕರು ಒತ್ತಾಯಿಸಿದ್ದಾರೆ.

ರಬಕವಿ–ಬನಹಟ್ಟಿ ನಗರಸಭೆಯು ದಿನದಿಂದ ದಿನಕ್ಕೆ ನಿವೇಶನ ಹಾಗು ಮನೆಗಳು ಬೆಳೆಯುತ್ತಿವೆ. ಕಳೆದ ನಾಲ್ಕೈದು ವರ್ಷಗಳಿಂದ ಮಹಾಲಿಂಗಪೂರ ಹಾಗು ಬನಹಟ್ಟಿ ರಸ್ತೆಗೆ ತೆರಳಲು ಭಗೀರಥ ವೃತ್ತಕ್ಕೆ ಅಂಟಿಕೊಂಡಿರುವ ಸಾವಿರಾರು ಜನರು ಬಸ್ ತೆರಳಲು ಬಿಸಿಲು ಹಾಗು ಮಳೆಯಲ್ಲಿ ದೂರದವರೆಗೆ ಬಸ್ ನಿಲ್ದಾಣದವರೆಗೆ ನಡೆದುಕೊಂಡೇ ಹೋಗಬೇಕಾದ ಅನಿವಾರ್ಯತೆಯಾಗಿದೆ.

ಮಹಿಳೆ, ವೃದ್ಧರು ಹಾಗು ಮಕ್ಕಳಿಗೆ ದಿನಂಪ್ರತಿ ಬಸ್ ಪ್ರಯಾಣಕ್ಕೆ ಸಮಸ್ಯೆ ಎದುರಾಗುತ್ತಿದ್ದು, ತಕ್ಷಣವೇ ಭಗೀರಥ ವೃತ್ತದ ಬಳಿ ವಿನಂತಿ ಮೇರೆಗೆ ಬಸ್ ನಿಲುಗಡೆ ಮಾಡಬೇಕೆಂದು ರಬಕವಿಯ ಸಮಸ್ತ ಜನತೆ ಸಂಬಂಧಿಸಿದ ಅಧಿಕಾರಿಗಳಿಗೆ ಮನವಿ ಪತ್ರದ ಮೂಲಕ ಒತ್ತಾಯಿಸಿದರು.

# ಡಾ. ಅಂಬೇಡ್ಕರ ಜಯಂತಿ ಆಚರಣೆಯಲ್ಲಿ ಪ್ರತಿಜ್ಞಾವಿಧಿ ಬೋಧನೆ



**ಜಮಖಂಡಿ :** ತಾಲೂಕಿನ ಹುನ್ನೂರು ಗ್ರಾಮದ ಡಾ.ಅಂಬೇಡ್ಕರ್ ವೃತ್ತದಲ್ಲಿ ಸಂವಿಧಾನಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ ಜಯಂತಿ ಕಾರ್ಯಕ್ರಮದಲ್ಲಿ ಲೋಕಸಭೆ ಚುನಾವಣೆಯಲ್ಲಿ ಎಲ್ಲರೂ ಕಡ್ಡಾಯವಾಗಿ ಮತದಾನ ಮಾಡುವಂತೆ ಪಿಡಿಓ ಮಲ್ಲಪ್ಪ ರೂಗಿ ಪ್ರತಿಜ್ಞಾ ವಿಧಿ ಬೋಧಿಸಿದರು. ಇದೇ ಸಂದರ್ಭದಲ್ಲಿ ಗ್ರಾಪಂ ಅಧ್ಯಕ್ಷ ಅಪ್ಪಣ್ಣ ಜನವಾಡ, ಸದಸ್ಯರಾದ ಚಂದ್ರು ಕಲಬುರ್ಗಿ, ರೇಣುಕಾ ದೊಡಮನಿ, ಈಶ್ವರ ಚನ್ನಪ್ಪಗೋಳ, ಶೇಖರ ಭಜಂತ್ರಿ, ಮಾಂಗ, ಕಾಶಿಬಾಯಿ ಅವಟಗೇರ, ಮುಖಂಡರಾದ ಹಣಮಂತ ಹೊಳೆಪ್ಪಗೋಳ, ಪ್ರವೀಣ ಹೊಳೆಪ್ಪಗೋಳ, ಅಂಬೇಡ್ಕರ್ ಯುವಕ ಸಂಘದ ಸದಸ್ಯರು, ಗ್ರಾಪಂ ಸಿಬ್ಬಂದಿ ಭಾಗವಹಿಸಿದ್ದರು.

"SIHI KAHI" Kannada Daily Morning, Editor, Owner, Publisher, Printer by MARUTI BASAVANTAPPA HOASAMANI Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at SUDIN PRINTERS, Sector No. 33, Shop No. 38 & 40, Opp. Ambedkar Bhavan, NAVANAGAR, BAGALKOT-587 101. Dist : Bagalkot, Karnataka State